International Journal of Kannada Research
www.kannadajournal.com

**ISSN: 2454–5813**
IJSR 2016; 2(3): 21-31
© 2016 IJKS
www.kannadajournal.com
Received: 06-05-2016
Accepted: 07-06-2016

**ಸಂಜಯ ಎನ್. ಹಂಜೆ**
ಸಂಶೋಧನ ವಿದ್ಯಾರ್ಥಿ, ಪ್ರಾಚೀನ ಭಾರತದ ಇತಿಹಾಸ ಮತ್ತು ಶಾಸನವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩.

**ಡಾ. ಲೋಕೇಶ**
ಅಧ್ಯಕ್ಷರು ಮತ್ತು ಪ್ರಾಧ್ಯಾಪಕರು, ಪ್ರಾಚೀನ ಭಾರತದ ಇತಿಹಾಸ ಮತ್ತು ಶಾಸನವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩.

**Correspondence**
**ಸಂಜಯ ಎನ್. ಹಂಜೆ**
ಸಂಶೋಧನ ವಿದ್ಯಾರ್ಥಿ, ಪ್ರಾಚೀನ ಭಾರತದ ಇತಿಹಾಸ ಮತ್ತು ಶಾಸನವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩.

# ಶಾಸನಗಳೋಕ್ತ ಅಣ್ಣಿಗೇರಿಯ ಜೈನಾಚಾರ್ಯರು

**ಸಂಜಯ ಎನ್. ಹಂಜೆ, ಡಾ. ಲೋಕೇಶ**

## ೧. ಪೀಠಿಕೆ

ಜೈನ ಧರ್ಮವು ಸಂಸಾರ ದುಃಖದಿಂದ ಆತ್ಮನನ್ನು ಮುಕ್ತಗೊಳಿಸಿ ಉತ್ತಮ (ಶಾಶ್ವತ) ಸುಖವನ್ನು (ಮೋಕ್ಷ) ಪಡೆಯಲು 'ಶ್ರಾವಕಧರ್ಮ' ಮತ್ತು 'ಮುನಿಧರ್ಮ' ಎಂಬೆರಡು ವಿಧದಲ್ಲಿ ಸತ್ಯಸಾಧನೆಯ ಸೋಪಾನಗಳನ್ನು ನಿರೂಪಿಸಿದೆ. ಸಾಮಾನ್ಯ ಗೃಹಸ್ಥನು ಪ್ರಾರಂಭದಲ್ಲಿ ಬ್ರಹ್ಮಚರ್ಯ ವ್ರತವನ್ನು ಪಾಲಿಸುತ್ತ ಕ್ರಮೇಣ ಹಂತಹಂತವಾಗಿ ಕ್ಷುಲ್ಲಕದೀಕ್ಷೆ, ಐಲಕದೀಕ್ಷೆ, ದಿಗಂಬರ ಮುನಿದೀಕ್ಷೆಯನ್ನು ಪಡೆದು ಅಂತ್ಯದಲ್ಲಿ ಸಲ್ಲೇಖನ ವ್ರತದಿಂದ ಸಮಾಧಿಮರಣ ಹೊಂದಿದ್ದಾಗಲೇ ಮೋಕ್ಷ ಸುಖವನ್ನು ಹೊಂದಲು ಅರ್ಹನಾಗುತ್ತಾನೆ. ಈ ರೀತಿ ಗೃಹಸ್ಥರು ಮುನಿಗಳಾಗಿ ತಮ್ಮ ಜೀವನವನ್ನು ಪಾವನಗೊಳಿಸಿಕೊಂಡಿರುವ ಸಹಸ್ರಾರು ನಿದರ್ಶನಗಳು ತತ್ಕಾಲೀನ ಶಾಸನಗಳು ಮತ್ತು ಸಮಕಾಲೀನ ಕೃತಿ–ಕಾವ್ಯಗಳಲ್ಲಿ ಗೋಚರಿಸುತ್ತವೆ. ಅವರು ಜೈನಾಗಮಗಳಲ್ಲಿ ಸೂಚಿಸಿರುವ ತತ್ವಾಚರಣೆಗಳನ್ನು ಶ್ರದ್ಧೆಯಿಂದ ಪಾಲಿಸುತ್ತ ಹಾಗೂ ಸಾಧನೆಯ ಹಾದಿಯಲ್ಲಿ ಎದುರಾಗುವ ಪರಿಷಹಗಳನ್ನು (ಉಪಸರ್ಗಗಳು) ತಾಳ್ಮೆಯಿಂದ ಸಹಿಸುತ್ತ ಮಹಾಮುನಿಗಳಾಗಿ ಧರ್ಮಪ್ರಸಾರದೊಂದಿಗೆ ಪ್ರಭಾವಶಾಲಿಗಳಾಗಿ ಸಮಾಜವನ್ನು ಜಾಗೃತಗೊಳಿಸಿ ಲೋಕವಂದಿತರಾಗಿದ್ದಾರೆ. ಬಹುಭಾಷಾಶಾಸ್ತ್ರ ವಿಶಾರದರೂ, ಉನ್ನತಮಟ್ಟದ ವ್ಯಾಕರಣಶಾಸ್ತ್ರಗಳಲ್ಲಿ ಪಾರಂಗತರೂ, ಶಬ್ದಾರ್ಥತತ್ವರರೂ, ಉದ್ಯದ್ಗುಣಭೂಷಣರೂ, ತ್ರೈವಿದ್ಯಚಕ್ರೇಶ್ವರರೂ, ಸಮ್ಯಕ್ತ್ವರತ್ನಾಕರರೂ, ಸ್ಯಾದ್ವಾದ ಸಿದ್ಧಾಂತದಲ್ಲಿ ಪ್ರವೀಣರೂ, ಕಠಿಣ ತಪೋಧನರೂ, ಉದಾತ್ತ ಆಚಾರ–ವಿಚಾರವಂತರೂ, ಜನಪರ ಚಿಂತನಕಾರರೂ, ಪರಧರ್ಮ ಸಹಿಷ್ಣುಗಾರರೂ, ಬಸದಿ–ಮಠಮಾನ್ಯಗಳ ಸ್ಥಾನಾಚಾರ್ಯರೂ ಆದ ಜೈನ ಮುನಿಗಳು ಜಂಗಮತೀರ್ಥರಾಗಿದ್ದರು. ಅಂದರೆ ನಡೆದಾಡುವ ತೀರ್ಥಂಕರರೆಂದು (ಚಲ್ತೆ ಫಿರ್ತೇ ಭಗವಾನ್) ಪ್ರಸಿದ್ಧರಾಗಿದ್ದರು.

ಆರೋಹಸ್ವರಥೆ ಪಾರ್ಥ ಗಾಂಡೀವಂ ಚ ಕರೇ ಕುರು ।
ನಿರ್ಜಿತಾ ಮೇದಿನೀ ಮನ್ಯೇ ನಿರ್ಗ್ರಂಥೊ ಯಸ್ಯ ಸಮ್ಮುಖೇ ॥

ಎಂಬಂತೆ ಜೈನ ಮುನಿಗಳ ದರ್ಶನದಿಂದ ಎಲ್ಲ ಕಷ್ಟಗಳೂ ದೂರವಾಗುವವು, ಪ್ರತಿಯೊಂದು ಕಾರ್ಯದಲ್ಲಿ ಯಶಸ್ಸು ಸಿಗುವುದು, ಎಂತಹ ಸ್ಪರ್ಧೆ–ಯುದ್ಧಗಳಲ್ಲಿಯೂ ಗೆಲವು ನಿಶ್ಚಿತವಾಗುವುದು.೧

ಉಪಚಾರಕ್ಕುಡಲೀವವಂಗುಣವಿಡಲ್ಮತ್ತೇನನೂಲ್ದೀಯನೋ ।
ಉಪಮಾತೀತನೆ ನಿಮ್ಮ ಬಿಂಬವನಲಂಪಿಂದರ್ಚಿಸಲ್ಸಂಪದಂ ॥
ವಿಪುಳಾನಂದದೆ ನಿಮ್ಮ ರೂಪಿನ ಮುನೀಂದ್ರರ್ಗನ್ನಮಂ ನೀಡುವಂ ।
ಗಪವರ್ಗಂ ನಿಜದುರ್ಗಮಪ್ಪುದರಿದೇ ರತ್ನಾಕರಾಧೀಶ್ವರಾ ॥

ತೀರ್ಥಂಕರರ ರೂಪದ ಮುನೀಂದ್ರರಿಗೆ ಆಹಾರದಾನವಿತ್ತರಿಗೆ ಮೋಕ್ಷವೇ ರಕ್ಷಣೆಯ ದುರ್ಗವಾಗುವುದು.೨ ಹಾಗಾಗಿಯೇ ಕನ್ನಡನಾಡಿನಲ್ಲಿ ಪ್ರಭುಗಳು ಮತ್ತು ಪ್ರಜೆಗಳಿಂದ ಜೈನ ಮುನಿಗಳು ವಿಶೇಷವಾಗಿ ಗೌರವಿಸಲ್ಪಟ್ಟು ಸಮ್ಮಾನಿತರಾಗಿದ್ದರು, ಪೂಜಿತರಾಗಿದ್ದರು. ಆಳರಸರಾದಿ ಅಧಿಕಾರಿಗಳು ಮತ್ತು ಪ್ರಜೆಗಳು ಜೈನ ಮುನಿಗಳ ಉಪದೇಶಗಳಿಂದ ಸ್ಫೂರ್ತಿ–ಪ್ರೇರಣೆ ಪಡೆದು

ಅವರನ್ನು ಗೌರವಿಸುವುದರೊಂದಿಗೆ ಬಸದಿಗಳ ನಿರ್ಮಾಣ, ಜೀರ್ಣೋದ್ಧಾರ, ಶಿಲ್ಪಗಳ ಪ್ರತಿಷ್ಠಾಪನೆಯೊಂದಿಗೆ ಅವರ ಸನ್ನಿಧಿಯಲ್ಲಿಯೇ ವಿವಿಧ ಜೈನ ಸಾಂಸ್ಕೃತಿಕ ಚಟುವಟಿಕೆಗಳಿಗೆ ಉದಾರವಾಗಿ ದಾನ-ದತ್ತಿಗಳನ್ನು ಕೊಡಮಾಡಿ ಜೈನ ಸಂಸ್ಕೃತಿಯ ಸಂವರ್ಧನೆಗೆ ಶ್ರಮಿಸಿದ್ದಾರೆ.

ಕನ್ನಡನಾಡಿನ ಮಣ್ಣಿನಲ್ಲಿ ಪ್ರಾಚೀನ ಕಾಲದಿಂದಲೂ ಜೈನ ಧರ್ಮದ ಪುನುರುಜ್ಜೀವನ ಮತ್ತು ಪ್ರಸಾರ ಕಾರ್ಯದಲ್ಲಿ ಬಹು ಮುಖ್ಯವಾದ ಪಾತ್ರವಹಿಸಿರುವ ಮುನಿಗಳನ್ನು ನಿರ್ಮಿಸುವ ಅಭೂತಪೂರ್ವ ಶಕ್ತಿ ಅಡಗಿದೆ. ಈ ನಾಡು ಅನೇಕ ಮಹಾಮುನಿಗಳಿಗೆ ಜನ್ಮಕೊಟ್ಟಿದೆ. ಆ ಕಾರಣದಿಂದಲೇ ಈ ನಾಡಿನಲ್ಲಿ ಸಹಸ್ರಾರು ಮುನಿಗಳು ಬದುಕಿಬಾಳಿ ನಾಡನ್ನು ಸಾಂಸ್ಕೃತಿಕವಾಗಿ ಸಂಪದ್ಭರಿತವಾಗಿಸಿದ್ದಾರೆ. ಅವರ ವಿಶಿಷ್ಟವಾದ ಧರ್ಮಪ್ರಸಾರದಿಂದ ಜೈನ ಧರ್ಮವು ಈ ನಾಡಿನ ಸಂಸ್ಕೃತಿಯೊಂದಿಗೆ ಹಾಸುಹೊಕ್ಕಾಗಿ ಬೆಳೆದು ಬಂದಿದೆ. ಜೊತೆಗೆ ಈ ನಾಡಿನ ವಾಸ್ತು, ಶಿಲ್ಪ, ಸಂಸ್ಕೃತಿ, ಸಮಾಜ, ಇತಿಹಾಸ, ಧರ್ಮ, ಸಾಹಿತ್ಯ ಮೊದಲಾದ ಕ್ಷೇತ್ರಗಳನ್ನೂ ಶ್ರೀಮಂತವಾಗಿಸಿ ಜಗತ್ತಿನ ಇತಿಹಾಸದ ಪುಟದಲ್ಲಿ ಇದಕ್ಕೊಂದು ಮಹತ್ವವಾದ ಸ್ಥಾನವನ್ನೂ ಕಲ್ಪಿಸಿಕೊಟ್ಟಿದೆ.೩ ಕೇಶಿರಾಜನು 'ಶಬ್ದಮಣಿದರ್ಪಣ'ದಲ್ಲಿ (ಕ್ರಿ.ಶ. ೧೨೬೦) ೧೭೮ನೆಯ ಸೂತ್ರದಲ್ಲಿ 'ಪೂರ್ವಪದವು ಕಾರಕವಾಗಿಯೂ ಪರಪದವು ಕ್ರಿಯೆಯಾಗಿಯೂ ಇದ್ದರೆ ಅದು ಕ್ರಿಯಾಸಮಾಸವೆನಿಸುತ್ತದೆ' ಎಂದು ಸೂಚಿಸುತ್ತ, ಅರಿಸಮಾಸ ನಿರ್ದೋಷಕ್ಕೆ ಕೊಟ್ಟಿರುವ ಉದಾಹರಣೆಯಲ್ಲಿ_

ಸವಣಂ ಬಳಪಂಗೊಳೆ ಗಾಂ
ಡಿವಿ ಬಿಲ್ಗೊಳೆ ಬಲವಿರೋಧಿ ವಜ್ರಂಗೊಳೆ ದಾ
ನವರಿಪು ಚಕ್ರಂಗೊಳೆ ಕೌ
ರವಾರಿ ಗದೆಗೊಳೆ ಪೊಣರ್ಕೆಗಾವಂ ನಿಲ್ವಂ ॥

'ಸವಣನು ತನ್ನ ಲೇಖನಿಯನ್ನೆತ್ತಿದೊಡನೆ ಯಾವ ವೀರನು ಅವನನ್ನು ಎದುರಿಸಬಲ್ಲವನಾಗಿದ್ದನು?' ಎಂದು ಬಣ್ಣಿಸಿದ್ದಾನೆ.೪ ಇದು ಜೈನ ಮುನಿಗಳ ವಿದ್ವತ್ತೆಗೆ ಉತ್ತಮ ನಿದರ್ಶನವಾಗಿದೆ. ಎಂತಲೇ ಧರ್ಮನಿರಪೇಕ್ಷ ಭಾವನೆಯಿಂದ ಕನ್ನಡನಾಡಿನಲ್ಲಿ ಕನ್ನಡ ಭಾಷೆಯ ಸೇವೆಯನ್ನು ಯಾರಾದರೂ ಮಾಡಿದ್ದರೆ ಆ ಕೀರ್ತಿ ಜ್ಞಾನ ಮತ್ತು ವಿವೇಕಪ್ರದವಾದ ಜೈನ ಮುನಿಗಳು ಹಾಗೂ ಕವಿಗಳಿಗೆ ಸಲ್ಲುತ್ತದೆ. ಅಹಿಂಸಾ ಪಾಲನೆಯನ್ನು ಎಚ್ಚರಿಕೆಯಿಂದ ನಿರ್ವಹಿಸುತ್ತ, ನಿವೃತ್ತಿಮಾರ್ಗದಲ್ಲಿ ಸಂಚಾರವನ್ನು ಕೈಕೊಂಡು, ಲೌಕಿಕ ಅಪೇಕ್ಷೆಗಳನ್ನು ಗೆಲಿದು, ಹೃದಯವನ್ನು ಸಂಪೂರ್ಣವಾಗಿ ಬರಿದು ಮಾಡಿ ನಿರ್ವಾಣವನ್ನು ಸಾಧಿಸುವ ಜೈನ ಮುನಿಗಳನ್ನು ಮ್ಯಾಕ್ಸ್ ವೇಬರ್‌ನು 'ಸುಸಂಸ್ಕೃತ ವೃತ್ತಿಸಂಪನ್ನರು' ಎಂದು ಕರೆದಿರುವನು.೫

## ೨. ಶಾಸನಗಳೋಕ್ತ ಅಣ್ಣಿಗೇರಿಯ ಜೈನಾಚಾರ್ಯರು

ಕನ್ನಡನಾಡಿನ ಪ್ರಾಚೀನ ಕೈನ ಕೇಂದ್ರಗಳಲ್ಲಿ ಅಣ್ಣಿಗೇರಿಯೂ ಒಂದಾಗಿದೆ. ಇಲ್ಲಿ ಅನೇಕ ಜೈನ ಮುನಿಗಳು, ಕಂತಿಯರು ಮತ್ತು ಭಟ್ಟಾರಕರು ಜೈನ ಧರ್ಮದ ಪುನರುಜ್ಜೀವನ ಮತ್ತು ಪ್ರಸಾರ ಕಾರ್ಯದಲ್ಲಿ ತೊಡಗಿ ಸಮಾಜವನ್ನು ಜಾಗೃತಗೊಳಿಸಿದ್ದಾರೆ. ಸಮಕಾಲೀನ ಆಳರಸರು, ಅಧಿಕಾರಿಗಳು, ವ್ಯಾಪಾರಿಗಳು, ಪ್ರಜೆಗಳು ಬಸದಿಗಳ ನಿರ್ಮಾಣ, ಜೀರ್ಣೋದ್ಧಾರ, ಶಿಲ್ಪಗಳ ಪ್ರತಿಷ್ಠಾಪನೆ, ವಿವಿಧ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಿಗೆ ಉದಾರವಾಗಿ ದಾನ-ದತ್ತಿಗಳನ್ನು ಕೊಡಮಾಡಲು ಈ ಮುನಿಗಳ ಪ್ರಭಾವ ಹಾಗೂ ಪ್ರೇರಣೆ ಅಪಾರವಾಗಿದೆ. ಈ ಮುನಿಗಳು ಕೈಗೊಂಡ ಕಠಿಣ ತಪಸ್ಸು, ಧರ್ಮಪ್ರಸಾರ, ವ್ರತಗಳ ಪಾಲನೆ, ಜೈನಾಗಮಗಳಲ್ಲಿ ಅವರಿಗಿದ್ದ ಪಾಂಡಿತ್ಯ, ವಿದ್ವತ್ತು, ಸಮಕಾಲೀನ ಸಮಾಜದಲ್ಲಿ ಅವರ ಸ್ಥಾನ-ಮಾನ, ಆಳರಸಾದಿ ಪ್ರಜೆಗಳು ಅವರಿಗೆ ತೋರುತ್ತಿದ್ದ ನಿಷ್ಠೆ-ಗೌರವಾದರ ತನ್ಮಯತೆ ಮೊದಲಾದ ವಿವರಗಳು ಸ್ಥಳೀಯ ಮತ್ತು ಇತರೆಡೆಯ ಹಲವು ಶಾಸನಗಳಲ್ಲಿ ಬಹು ಮಾರ್ಮಿಕವಾಗಿ ವರ್ಣಿತವಾಗಿವೆ.

### ೨.೧. ನಂದ್ಯಾಚಾರ್ಯ ಮತ್ತು ಮಹೇಂದ್ರದೇವ ಭಟ್ಟಾರಕ

ಲಕ್ಷ್ಮೇಶ್ವರದ ಕ್ರಿ.ಶ. ೯೬೮ರ ಶಾಸನದಲ್ಲಿ_

ಶ್ರೀಮತ್ಕಾಕುಸ್ಥರಾಜ ಪ್ರಿಯತನಯಸೆದುಕ್ಸತ್ತಿವರ್ಮ್ಮಾ ಬಭೂವ
ತತ್ಪು.......ರ ನೃಪವಿಜಯಶ್ರೀ ಸಮಾನ್ವಿಷ್ಟವಕ್ಷಾಃ ಶ್ರೀಮಾನ್ಯೋಯಂ
ನೃಪೇಂದ್ರಸಪನಸಮ ಮಹೋಪ.....ಕ್ತಾಧಾತ್ರಿಂ ಸದ್ವೃತ್ತಚಿತ್ತಃ
ಪ್ರವರಗುಣಗಣಾರಕ್ಷತು ಶ್ರೀ ವಿಶಾಳ ॥ .........................
ಹೂತೇ ರವಿರಾಜ ಪ್ರಿಯಾಚ್ಚಕೃನ್ನೃಪತೋ ಜಯಕೀರ್ತ್ತಿಭ್ಯೋಂ
ಮೂಳಪೃಥ್ವಿಂ ಪ್ರಶಾಸ.....ಯ ನಯೋಪಚಾರ ಶೌರ್ಯ್ಯ ಧೈರ್ಯ್ಯ
ಸತ್ಯ ಶೌಚ ತ್ಯಾಗ ಸಿಂಹಾಸನ ಸೌಚಾಚಾರ ಗುಣ ಭೂಷಾಭೂಷಿತ
ವಿಗ್ರಹೇ ದಕ್ಷಿಣ ಪೃಥ್ವೀಲಲಾಮ ಕದಂಬ ವಂಶೋದ್ಭವ ರವಿರಾಜ
ಭೂ........... ಪ್ರಿತಿಪೂರ್ವ್ವಕಂ ಬೃಹತ್ತರಾಮಿಮಾಂ ಪೃಥ್ವಿಂ ತಾ
ಸತಿ
ಶ್ರೀಮತ್ಸೇಂದ್ರಕುಳತಿಳಕೇ.......... ನರವೀರ ರವಿವರ್ಮ್ಮರಾಜ ಪ್ರಿಯ
ಮೈದುನಯುಮತ್ಸೇಂದ್ರಕ ವಿಷಯಾಧಿಪತ್ಯಂ ಕುರ್ವ್ವ....
ಶ್ರೀಮತ್ಸೇಂದ್ರಕ
ವಿಷಯ ರಾಜಗುರೋರ್ಬ್ಭುವನ ನಂದ್ಯಾಚಾರ್ಯ್ಯಸ್ಯ
ಸದ್ಧರ್ಮ್ಮೋಪದೇಶದಿಂ
ನೃಪ ಕಾಲಾತೀತ ಸಂವತ್ಸರ ಶತೇಷಷ್ಟ ಸುನವತ್ಯುತ್ತರೇಷು
ಗತೇಷು
ಪ್ರವರ್ತ್ತಮಾನ ವಿ............ ಚೈತ್ರಮಾಸೇ ಶುಕ್ಲಪಕ್ಷೇ ಸೋಮವಾರೇ
ಪೌರ್ಣ್ಣಮಾಸ್ಯಾಂ ತಿಥೋ ಸೋಮಗ್ರಹಣ ಜೈ..........ತಾ
ಸದ್ಧರ್ಮ್ಮ
ಪರಾಯಣೇನ ಶ[ಸ]ತ್ತಿವರ್ಮ್ಮಭೂಪೇನ ಲೋಕದ್ವಯ
ಸುಖಾವಾಪ್ತ್ಯರ್ತ್ಥಂ
ಅಂಣ್ನಿಗೆಱೆ ಗ್ರಾಮ ಗ್ರಾಮಾಂತರ ಪಾರ್ಶ್ವನಾಗಾರ್ಜ್ಜುನ
ಜಿನಾಲಯಾಯ
ಖಂಡಸ್ಫುಟಿತ ಜೀರ್ಣ್ನೋದ್ಧಾರಕಂಗೆ ದೇವಗಣ ಕುಮುದಿನೀ
ಹಿಮಕರಸ್ಯ
ಶ್ರೀಮನ್ಮಹೇಂದ್ರದೇವ ಭಟ್ಟಾರಕಸ್ಯ ಪಾದೋಜ............
ಬೀರಭ್ಯರ್ಚ್ಚ್ಯಸ
ಹಿರಣ್ಯಜಳಧಾರಾ ಸಮನ್ವಿತಂ ಸರ್ವ್ವಬಾಧಾಪರಿಹಾರಪೂರ್ವ್ವಕಂ
ಅಂಣ್ಣಿಂಗೆಱೆನಾಮ ..................................................

ಕದಂಬರ ಕಾಕುಸ್ಥರಾಜನ ಮಗನಾದ ಸತ್ತಿವರ್ಮನು ಸೇಂದ್ರಕ ವಿಷಯದ ರಾಜಗುರು ನಂದ್ಯಾಚಾರ್ಯನ ಉಪದೇಶದಿಂದ ಕ್ರಿ.ಶ. ೯೬೮ರಲ್ಲಿ ಅಣ್ಣಿಗೇರಿಯ ಪಾರ್ಶ್ವನಾಗಾರ್ಜುನ ಬಸದಿಯ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ದೇವಗಣ ಪರಂಪರೆಯ ಮಹೇಂದ್ರದೇವ ಭಟ್ಟಾರಕನ ಪಾದಗಳನ್ನು ತೊಳೆದು ಸರ್ವಬಾಧಾ ಪರಿಹಾರವಾಗಿ ಹೆಬಸೂರು, ಶಿಶುವಿನಹಳ್ಳಿ, ಬಲ್ಲರವಾಡ, ಬಳ್ಳೂರು ಗ್ರಾಮಗಳಲ್ಲಿ ಪಂಚನಿವರ್ತನ ಪ್ರಮಾಣದಲ್ಲಿ ಎರೆಭೂಮಿಯನ್ನು ದಾನ ಮಾಡಿರುವ ನಿರೂಪಣೆಯಿದೆ.೬ ನಂದ್ಯಾಚಾರ್ಯನ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ. ಮಹೇಂದ್ರದೇವ ಭಟ್ಟಾರಕನು ಅಣ್ಣಿಗೇರಿಯ ಪಾರ್ಶ್ವನಾಗಾರ್ಜುನ ಬಸದಿಯ

ಸ್ಥಾನಾಚಾರ್ಯನಾಗಿದ್ದನು. ನಾಗಾರ್ಜುನ ಎಂಬುವವನು ಅಣ್ಣಿಗೇರಿಯಲ್ಲಿ ಪಾರ್ಶ್ವನಾಥ ಬಸದಿಯನ್ನು ಕಟ್ಟಿಸಿದ್ದನು. ಎಂತಲೇ ಅದು ಆತನ ಹೇಸರಿನಿಂದಲೇ ಕರೆಯಲ್ಪಟ್ಟಿದೆ. ಆದರೆ ಆತನ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ. ಕನ್ನಡನಾಡಿನಲ್ಲಿ ನಿರ್ಮಾಪಕರ ಹೆಸರಿನಿಂದಲೇ ಪ್ರಸಿದ್ಧವಾದ ಅನೇಕ ಬಸದಿಗಳು ಪ್ರಾಚೀನ ಕಾಲದಿಂದಲೂ ಗೋಚರಿಸುತ್ತವೆ.೭

**೨.೨. ವರ್ಧಮಾನಮುನಿ**

ಅಣ್ಣಿಗೇರಿಯ ಕ್ರಿ.ಶ. ೧೦೭೧-೭೨ರ ಶಾಸನದಲ್ಲಿ_

ಪರಮಶ್ರೀಜಿನಶಾಸನಕ್ಕೆ ಮೊದಲಾದೀ ಮೂಲಸಂಘಂ ನಿರ
ನ್ತರಮೊಪ್ಪುತ್ತಿರೆ ನನ್ದಿಸಂಘವೆಸರಿಂದಾದನ್ವಯಂ ಪೆಂಪುವೆ
ತ್ತಿರೆ ಸನ್ದರ್ವ್ವಳಗಾಱಮುಖ್ಯಗಣದೊಳು ಗಂಗಾನ್ವಯಕ್ಕಿನ್ತಿವ
ರ್ಗ್ಗುರುಗಳು ತಾಮೆನೆ ವರ್ಧಮಾನಮುನಿನಾಥರ್ದ್ದಾಣೀ
ಚಕ್ರದೊಳು ॥
ಶ್ರೀನಾಥರ್ಜ್ಜಿನಮಾರ್ಗ್ಗೋತ್ತಮರೆನಿಸಿ ತಪಹ ಖ್ಯಾತಿಯಂ
ತಾಳ್ದಿದರ್ಸ್ಸಜ್ಞಾನಾತ್ಮರ್ವ್ವರ್ದ್ಧಮಾನ ಪ್ರವರರವರ.................

ನಂದಿಸಂಘದ ಬಳಗಾರಗಣ ಪರಂಪರೆಯ ವರ್ಧಮಾನಮುನಿಯ ಪ್ರಸ್ತಾಪವಿದೆ.೮ ಗದಗ ತಾಲ್ಲೂಕಿನ ಗಾವರವಾಡದ ಕ್ರಿ.ಶ. ೧೦೭೧-೭೧ರ ಶಾಸನದಲ್ಲಿಯೂ ಈ ಮುನಿಯ ಉಲ್ಲೇಖವಿದೆ.೯ ಈತನು ಮುಕ್ತಿಯೆಂಬ ಲಕ್ಷ್ಮಿಗೆ ಒಡೆಯನೂ, ಜಿನಮಾರ್ಗದಲ್ಲಿ ಮೇಲಾದವನೂ ಎಂದೆನಿಸಿ ವಿಶೇಷವಾದ ಕಠಿಣ ತಪಸ್ಸು ಕೈಗೊಂಡು ಕೀರ್ತಿವಂತನಾಗಿದ್ದನು.೧೦ ತಲಕಾಡಿನ ಗಂಗರ ಗುರುವೂ, ಆ ಮನೆತನದ ಸ್ಥಾಪನಾಚಾರ್ಯನೂ ಆದ ಯಾಪನೀಯ ಸಂಘದ ಕಾಣೂರುಗಣ ಪರಂಪರೆಯ ಸಿಂಹಣಂದಿ ಆಚಾರ್ಯನ ತರುವಾಯ ಈ ವರ್ಧಮಾನಮುನಿ ಆ ಮನೆತನದ ಹಿರಿಯ (ಮುಖ್ಯ) ಗುರುವಾಗಿ ಜನಮನ್ನಣೆ ಪಡೆದನು. ಹಾಗಾಗಿಯೇ ಪ್ರಸ್ತುತ ಶಾಸನದಲ್ಲಿ ಈತನನ್ನು 'ಗಂಗಾನ್ವಯದವರು' ಎಂದು ಕರೆಯಲಾಗಿದೆ. ಆದರೆ ಈತನ ಶಿಷ್ಯರೆಲ್ಲರೂ ಕಲ್ಯಾಣದ ಚಾಳುಕ್ಯರ ಆಳ್ವಿಕೆಯ ಕಾಲಾವಧಿಯಲ್ಲಿ ಖ್ಯಾತನಾಮರಾಗಿದ್ದಾರೆ.

**೨.೩. ವಿದ್ಯಾನಂದಸ್ವಾಮಿ**

ಅಣ್ಣಿಗೇರಿಯ ಕ್ರಿ.ಶ. ೧೦೭೧-೭೨ರ ಶಾಸನದಲ್ಲಿ_

ವ್ವರ್ದ್ಧಮಾನ ಪ್ರವರರವರ ಶಿಷ್ಯರ್ಮ್ಮಹಾವಾದಿಗಳು
ವಿದ್ಯಾನನ್ದಸ್ವಾಮಿಗಳ್
ತನ್ಮುನಿಪತಿಗನುಜರ್ತ್ತಾರ್ಕ್ಕಿಕಾರ್ಕ್ಕಾಭಿಧಾ............

ವಿದ್ಯಾನಂದಸ್ವಾಮಿಯ ಪ್ರಸ್ತಾಪವಿದೆ.೧೧ ಗದಗ ತಾಲ್ಲೂಕಿನ ಗಾವರವಾಡದ ಕ್ರಿ.ಶ. ೧೦೭೧-೭೧ರ ಶಾಸನದಲ್ಲಿಯೂ ಈ ಮುನಿಯ ಉಲ್ಲೇಖವಿದೆ.೧೨ ಈ ಮೇಲಿನ ವರ್ಧಮಾನಮುನಿಯ ಶಿಷ್ಯನಾದ ಈತನು ಮಹಾವಾದಿಯಾಗಿದ್ದು, ತಾರ್ಕಿಕ ನೈಪುಣ್ಯದಿಂದ ಪ್ರಸಿದ್ಧನಾಗಿದ್ದನು.

**೨.೪. ಮಾಣಿಕ್ಯನಂದಿ**

ಅಣ್ಣಿಗೇರಿಯ ಕ್ರಿ.ಶ. ೧೦೭೧-೭೨ರ ಶಾಸನದಲ್ಲಿ ಮಾಣಿಕ್ಯನಂದಿಮುನಿಯ ಪ್ರಸ್ತಾಪವಿದೆ.೧೩ ಗದಗ ತಾಲ್ಲೂಕಿನ ಗಾವರವಾಡದ ಕ್ರಿ.ಶ. ೧೦೭೧-೭೧ರ ಶಾಸನದಲ್ಲಿಯೂ ಈ ಮುನಿಯ ಉಲ್ಲೇಖವಿದೆ.೧೪ ನಂದಿಸಂಘದ ಬಳಗಾರಗಣ ಪರಂಪರೆಗೆ ಸಂಬಂಧಿಸಿದ ಈತನು ಈ ಮೇಲಿನ ವಿದ್ಯಾನಂದಸ್ವಾಮಿಯ ಸಹಧರ್ಮಿ (ಸಹಪಾಠಿ / ಸಹವರ್ತಿ) ಆಗಿದ್ದನು. ಶ್ರವಣಬೆಳಗೊಳದ ಕ್ರಿ.ಶ. ೧೧೭೬ರ ಶಾಸನದಲ್ಲಿ_

ಮಾಣಿಕ್ಯನಂದಿಮುನಿಪ ಶ್ರೀನಯಕೀರ್ತ್ತಿವ್ರತೀಶ್ವರಸ್ಯ ಸಧರ್ಮ್ಮಃ
ಗುಣಚಂದ್ರದೇವತನಯೋ ರಾದ್ಧಾಂತಪಯೋಧಿಪಾರಗೋ ಭುವಿ ಭಾತಿ ॥

'ಗುಣಚಂದ್ರದೇವನ ಪುತ್ರನೂ (ಪ್ರೀತಿಯ ಶಿಷ್ಯನೂ), ಸಿದ್ಧಾಂತ ಪಾರಂಗತನೂ ಆದ ಮಾಣಿಕ್ಯನಂದಿ ಮುನಿಪನು ನಯಕೀರ್ತಿದೇವನ ಸೋದರ ಸನ್ಯಾಸಿಯಾಗಿದ್ದನು' ಎಂದು ನಿರೂಪಣೆಯಿದೆ.೧೫ ಪ್ರಸ್ತುತ ಶಾಸನೋಕ್ತ ಮಾಣಿಕ್ಯನಂದಿ ಮತ್ತು ಅಣ್ಣಿಗೇರಿ, ಗಾವರವಾಡ ಶಾಸನಗಳೋಕ್ತ ಮಾಣಿಕ್ಯನಂದಿ ಇಬ್ಬರೂ ಒಬ್ಬರೇ ಆಗಿರುವಂತೆ ತೋರುತ್ತದೆ.

**೨.೫. ಗುಣಕೀರ್ತಿಪಂಡಿತ**

ಅಣ್ಣಿಗೇರಿಯ ಕ್ರಿ.ಶ. ೧೦೭೧-೭೨ರ ಶಾಸನದಲ್ಲಿ ಉಲ್ಲಿಖಿತ ಗುಣಕೀರ್ತಿಪಂಡಿತನು ನಂದಿಸಂಘದ ಬಳಗಾರಗಣ ಪರಂಪರೆಯವನು.೧೬ ಗದಗ ತಾಲ್ಲೂಕಿನ ಗಾವರವಾಡದ ಕ್ರಿ.ಶ. ೧೦೭೧-೭೧ರ ಶಾಸನದಲ್ಲಿಯೂ ಈ ಮುನಿಯ ಉಲ್ಲೇಖವಿದೆ.೧೭ ಈತನು ಈ ಮೇಲಿನ ಮಾಣಿಕ್ಯನಂದಿಮುನಿಯ ಶಿಷ್ಯನು. ಕೊಪ್ಪಳದ ಕ್ರಿ.ಶ. ೧೦೦೫ರ ನಿಷಿಧಿ ಶಾಸನದಲ್ಲಿ_

ತಚ್ಛಿಷ್ಯೋಽಶೇಷ ಸಿದ್ಧಾಂತವಾದೀ ವಿದ್ವಜ್ಜನೋರ್ನ್ನುತಃ
ಗುಣಕೀರ್ತ್ತಿರಿತಿ ಶ್ರೀಮಾನಾಸೀದಾಶಾಂಬರಾಧಿಪಃ ॥
ವ್ಯಾಕರಣತರ್ಕ್ಕ ಸಿದ್ಧಾನ್ತಾದ್ಯಖಿಳಶ್ರುತಪಯೋಧಿ ಪಾರಂಗತಃ ॥

ಗುಣಕೀರ್ತಿಮುನಿ ಶಾಸ್ತ್ರ, ಸಿದ್ಧಾಂತ, ವ್ಯಾಕರಣ, ತರ್ಕ ಮೊದಲಾದ ಶಾಸ್ತ್ರಾಗಮಗಳಲ್ಲಿ ಪಾರಂಗತನಾಗಿದ್ದನು ಎಂದು ನಿರೂಪಣೆಯಿದೆ.೧೮ ಪ್ರಸ್ತುತ ಶಾಸನೋಕ್ತ ಗುಣಕೀರ್ತಿಪಂಡಿತ ಮತ್ತು ಅಣ್ಣಿಗೇರಿ, ಗಾವರವಾಡ ಶಾಸನಗಳೋಕ್ತ ಗುಣಕೀರ್ತಿಪಂಡಿತ ಇಬ್ಬರೂ ಒಬ್ಬನೇ ಆಗಿರುವಂತೆ ತೋರುತ್ತದೆ.

**೨.೬. ವಿಮಳಚಂದ್ರ**

ಅಣ್ಣಿಗೇರಿಯ ಕ್ರಿ.ಶ. ೧೦೭೧-೭೨ರ ಶಾಸನದಲ್ಲಿ ಉಲ್ಲಿಖಿತ ವಿಮಳಚಂದ್ರಮುನಿ ನಂದಿಸಂಘದ ಬಳಗಾರಗಣ ಪರಂಪರೆಯವನು.೧೯ ಗದಗ ತಾಲ್ಲೂಕಿನ ಗಾವರವಾಡದ ಕ್ರಿ.ಶ. ೧೦೭೧-೭೧ರ ಶಾಸನದಲ್ಲಿಯೂ ಈ ಮುನಿಯ ಉಲ್ಲೇಖವಿದೆ.೨೦ ಈತನು ಈ ಮೇಲಿನ ಗುಣಕೀರ್ತಿಪಂಡಿತನ ಶಿಷ್ಯನು. ಈತನ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ.

**೨.೭. ಗುಣಚಂದ್ರ**

ಅಣ್ಣಿಗೇರಿಯ ಕ್ರಿ.ಶ. ೧೦೭೧-೭೨ರ ಶಾಸನದಲ್ಲಿ ಉಲ್ಲಿಖಿತ ಗುಣಚಂದ್ರಮುನಿ ನಂದಿಸಂಘದ ಬಳಗಾರಗಣದ ಗಂಗಾನ್ವಯ ಪರಂಪರೆಯವನು.೨೧ ಗದಗ ತಾಲ್ಲೂಕಿನ ಗಾವರವಾಡದ ಕ್ರಿ.ಶ. ೧೦೭೧-೭೧ರ ಶಾಸನದಲ್ಲಿಯೂ ಈ ಮುನಿಯ ಉಲ್ಲೇಖವಿದೆ.೨೨ ಈತನು ಈ ಮೇಲಿನ ವಿಮಳಚಂದ್ರಮುನಿಯ ಶಿಷ್ಯನು. ಈತನ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ.

### ೨.೮. ಗಣ್ಡವಿಮುಕ್ತದೇವ

ಅಣ್ಣಿಗೇರಿಯ ಕ್ರಿ.ಶ. ೧೦೭೧–೭೨ರ ಶಾಸನದಲ್ಲಿ ಉಲ್ಲಿಖಿತ ಗಣ್ಡವಿಮುಕ್ತದೇವ ನಂದಿಸಂಘದ ಬಳಗಾರಗಣ ಪರಂಪರೆಯವನು.೨೩ ಗದಗ ತಾಲ್ಲೂಕಿನ ಗಾವರವಾಡದ ಕ್ರಿ.ಶ. ೧೦೭೧–೭೧ರ ಶಾಸನದಲ್ಲಿಯೂ ಈ ಮುನಿಯ ಉಲ್ಲೇಖವಿದೆ.೨೪ ಈತನು ಈ ಮೇಲಿನ ಗುಣಚಂದ್ರಮುನಿಯ ಶಿಷ್ಯನು. ಕೊಪ್ಪಳದ ಕ್ರಿ.ಶ. ೯೭೭ರ ನಿಷಿಧಿ ಶಾಸನದಲ್ಲಿ–

ಅಳವಿಗಳುಂಬಮಪ್ಪ ಗುಣಂ ಗುಣಗಣಸಕಳಾಗಮಾರ್ತ್ಥ
ನಿರ್ಮ್ಮಳದಿ ಪಣಾಧಿಕತ್ವಮನಸರ್ವಕಳಾ ಸಕಳಾಗಜ್ಞರಸ್ಖಳಿತ
ಚರಿತ್ರಮಂ ಪರಮ ಪಾವನಮಂ ಚರಿತಾ...ರಾಲ್ಬಭಿಚ್ಛಳಿಸು
ತುಮಿರ್ಪ್ಪಳಲ್ಲ ಪುದಮಣ್ಡಳಿ ಗಣ್ಡವಿಮುಕ್ತಿದೇವರುಂ.........
ಗಣ್ಡರ್ವ್ವಿಗುತರಂ ಕಣ್ಣಾಗಳ್ ॥
ಮಣ್ಡಳಿಕ ಮಕುಟಮಣಿಗಣಮಣ್ಡಿತ ಪಾದಾಬ್ಜ ಭವಸಂಕಾಶರ್ಗ್ಗಣ್ಡ
ವಿಮುಕ್ತಾಚಾರ್ಯ್ಯರ್ಪ್ಪಣ್ಡಿತ ಜನರಕಳಂಕ ನಿಕಟರತಿ ಗಂಭೀರರ್ ॥
.......ಯತಿಪತಿಯಂ ಯಮನಿಯಮ ವ್ರತಯುತ ಗುಣಶೀಳ
ಸಮಿತಿ ರಕ್ಷಣಪರನಂ ಯತಿ ನಿಕರಮೊ.....ಪೊಗಟ್ದಿಪುದತಿಶಯ
.........ಮುನಿಪುಂಗ....ರ್ । ಕ್ಷಾಮಹಿತರ್ಸ್ವರ ಮ...ಜಿನಸ್ವಾಮಿ
ಹಿತರ್ ವಿಮಳಚರಿತರಪಗತ ದುರಿತರ್ ಶ್ರೀಮದ್ಗಣ್ಡವಿಮುಕ್ತ
ಸ್ವಾಮಿಗಳಖಿಳಾವನಿತ ದೇಶಸ್ತುತ್ಯರ್ ಯುಕ್ತಾಚಾರರ್ಸ್ಸಕಳ
ವ್ಯಕ್ತಪರಿಜ್ಞಾನರಮಳ ಗುಣಗಣನಿಳಯರ್ ವ್ಯಕ್ತಕಷಾಯ
ಗಣ್ಡವಿಮುಕ್ತ ಭಟಾರರ್ಸ್ಸಮಸ್ತ ವಸುಧಾತಳದೊಳ್ ॥
ಮಣ್ಡಿತ ಚಾರುಚರಿತ್ರ ಪಣ್ಡಿತಘನರ್...ನೇಕ ಗುಣಗಣಯುಕ್ತರ್ಗ್ಗಣ್ಡ
ವಿಮುಕ್ತಸ್ಸಾಧಿಸಿಕೊಣ್ಡರಖಣ್ಡಿತ ವಿಮುಕ್ತಿ ಲಕ್ಷ್ಮಪದಮಂ ॥

ಗಣ್ಡವಿಮುಕ್ತಮುನಿ ಸಕಲಾಗಮಜ್ಞನೆಂದೂ, ಅನೇಕ ಮಾಂಡಳಿಕರು ಈತನಿಗೆ ಗೌರವ ಸಲ್ಲಿಸುತ್ತಿದ್ದರೆಂದೂ ನಾನಾರೀತಿಯ ಪ್ರಸ್ತಾಪವಿದೆ.೨೫ ಈತನು–

ಸ್ವಸ್ತಿ ಸಕಕಾಳಕ್ರಾನ್ತಾ ಸಂವತ್ಸರಂ ಪ್ರವರ್ತ್ತಿಸೆತದ್ವರ್ಷಾಭ್ಯನ್ತರದ
ಮಾಘ ಬಹುಳ ೯ ಬೃಹಸ್ಪತಿವಾರದಂದು ಶ್ರೀಮದ್ಗಣ್ಡವಿಮುಕ್ತ
ಭಟ್ಟಾರಕರ್ಮ್ಮುಕ್ತಿಯಂ ಸಾಧಿಸಿಕೊಣ್ಡರ್ ॥ ..................
ಶ್ರೀಮತ್ರಿಭುವನಚಂದ್ರಸ್ವಾಮಿ ಪದಾಂಭೋಜ ಭೃಂಗಿ ಪಿಟ್ಟಬ್ಬೆ
ಕರಂ ಪ್ರೇಮದೆನಿಸಿಟಿ್ದ ರಾಖ್ಯಮನೀ ಮಹಿಯೊಳ್ನೆಗಟ್ದಿ........
ಕುಪಣದೊಳ್ ಸ್ಥಾಪಿಸಿದಳ್ ॥ ಬಳಗಾಱಗಣದ
ಗಣ್ಡವಿಮುಕ್ತಿದೇವರ್ ॥

ಕೊಪ್ಪಳ ಮಹಾತೀರ್ಥದಲ್ಲಿ ಸಲ್ಲೇಖನ ವ್ರತಧಾರಿಯಾಗಿ ಮುಡಿಪಿ ಪಂಡಿತಮರಣ ಪಡೆದನು. ಈ ಮರಣದ ಪರೋಕ್ಷ ವಿನಯಾರ್ಥವಾಗಿ ತ್ರಿಭುವನಚಂದ್ರಸ್ವಾಮಿಯ ಭೃಂಗಿ (ಶಿಷ್ಯೆ) ಪಿಟ್ಟಿಕಬ್ಬೆ ನಿಷಿಧಿಕಲ್ಲನ್ನು ಸ್ಥಾಪಿಸಿದಳು.೨೬ ಕೊಪ್ಪಳದ ಕ್ರಿ.ಶ. ೧೦೦೦ರ ನಿಷಿಧಿ ಶಾಸನದಲ್ಲಿಯೂ–

ಅವಷಪಾರಂ ಶ್ರುತಸಾಗರಸ್ಯ ಸತ್ಪಣ್ಡಿತೋ
ಗಣ್ಡವಿಮುಕ್ತದೇವಾತ್ ॥

ಎಂದು ಗಣ್ಡವಿಮುಕ್ತದೇವನ ನಿರೂಪಣೆಯಿದೆ.೨೭

### ೨.೯. ಅಭಯನಂದಿಪಂಡಿತದೇವ

ಅಣ್ಣಿಗೇರಿಯ ಕ್ರಿ.ಶ. ೧೦೭೧–೭೨ರ ಶಾಸನದಲ್ಲಿ ಉಲ್ಲಿಖಿತ ಅಭಯನಂದಿಪಂಡಿತದೇವನು ನಂದಿಸಂಘದ ಬಳಗಾರಗಣ ಪರಂಪರೆಯವನು.೨೮ ಗದಗ ತಾಲ್ಲೂಕಿನ ಗಾವರವಾಡದ ಕ್ರಿ.ಶ. ೧೦೭೧–೭೧ರ ಶಾಸನದಲ್ಲಿಯೂ ಈ ಮುನಿಯ ಉಲ್ಲೇಖವಿದೆ.೨೯ ಈ ಮೇಲಿನ ಗುಣಚಂದ್ರಮುನಿಯ ಶಿಷ್ಯನಾದ ಇವನು–

ತದಪತ್ಯಗ್ಗುರ್ಣಕೀರ್ತ್ತಿಪಣ್ಡಿತರವರ್ತ್ತಚ್ಛಾಸನಖ್ಯಾತಿ ಕೋವಿದರಾ
ಸೂರಿಗಳಾತ್ಮಜರ್ವ್ವಿಮಳಚನ್ದ್ರರ್ತ್ತಪದಾಂ ಭೋಜಷಟ್ಪದರುದ್ಯದ್ಗುಣ
ಚನ್ದ್ರರನ್ತವರ ಶಿಷ್ಯರ್ ನೋಡಿ ಶಾಸ್ತ್ರಾರ್ತ್ಥದೊಳ್ವಿದಿತರಾ
ಗಣ್ಡವಿಮುಕ್ತ
ರಿನ್ನಭಯನನ್ದ್ಯಾಚಾರ್ಯ್ಯರಾರ್ಯ್ಯೋತ್ತಮರ್ ॥

ಕಠಿಣ ತಪಸ್ಸು, ಶಾಸ್ತ್ರ–ಸಿದ್ಧಾಂತ, ಚಾರಿತ್ರ್ಯ ಮತ್ತು ನಿಯಮಗಳಲ್ಲಿ ಅಗ್ಗಳಿಕೆಯುಳ್ಳವನಾಗಿದ್ದನು. ಕೊಪ್ಪಳದ ಕ್ರಿ.ಶ. ೧೦೦೫ರ ನಿಷಿಧಿ ಶಾಸನದಲ್ಲಿ–

ತಚ್ಛಿಷ್ಯಃ ಪ್ರಖ್ಯಾತಸ್ತಪೋಗುಣೈರಭಯನನ್ದಿಪಣ್ಡಿತದೇವಃ ॥
.............ಮಿತಮಾಯುಷ್ಯಂ ಸನ್ಯಾ..........ಕರಾದ....
ನಶನವಿಧಿನೈವಸಮಾಗತ್ಯಕುಪಣೇಸ್ಮಿನ್ ॥
ಸಂಪ್ರಾಪ್ತೇರಸಪಕ್ಷನ್ವಸುಮಿತಿಂ ಕಾಳೇ ಶಕಕ್ಷ್ಮಾಭೃತಃ ವರ್ಷೇ
ಕ್ರೋಧಿನಿ ಫಾಲ್ಗುನೇ ರವಿದಿನೇ ಕೃಷ್ಣಾಷ್ಟಮಿ ಸಂಯುಜಿ
ಸನ್ಯಸ್ತಃ ಪರಿಪನ್ಥಿತಾಮುಪಪದದ್ವಿದ್ಯಾನಿಧಾವಾತ್ಮನಿ ಪ್ರಖ್ಯಾತೊ
ಭಯನನ್ದಿಪಣ್ಡಿತ ಮುನಿರ್ಮ್ಮುಕ್ತ್ಯಾಮರೇನ್ದ್ರಶ್ರೀಯಃ ॥
ಅವರನ್ತೇವಾಸಿಗಳಭಿಭವಿತಾನ್ಯಮತರ್ ಪರೋಕ್ಷವಿ
ನಯವಿಧಾನಕ್ಕವಗೆ ಜಿನಚನ್ದ್ರಮುನಿಪುಂಗವರಧಿಗತ
ಭಕ್ತಿಯಿನ್ದಿದಂ ಮಾಡಿಸಿದರ್ ॥
ಜಳನಿಧಿಯಿನ್ದಲಂಘ್ಯಮೆನದೀ ನಿಚಯಂ ದಿನನಾಥನಿಂದ
ಮುಜ್ಜಳಿಕುಮೇತಾರಕಾಳಿ ಕುಳಶೈಳದಿನುದ್ದಮೇ ಬೆಟ್ಟುಗಳ್
ಮಹೀತಳದೊಳ್..........ಯಮಪಾತಪದೊಳ್ ಶ್ರುತದೊಳ್
ಚರಿತ್ರದಗ್ಗಳಿಕೆಯೊಳಾರುಮೇನಭಯನನ್ದಿಮುನೀಶ್ವರರಿಂ
ವಿಶೇಷಮೇ ॥
ಸ್ವಸ್ತಿ ಶ್ರೀಮತ್ ಸ್ವರೋದಯ ಚಕ್ರವರ್ತ್ತಿ
ಜಿನಚಂದ್ರಪಣ್ಡಿತರ್ಮ್ಮಾಡಿಸಿದರ್ ॥
ಅಣ್ಣಿಗೆಱೆಯ ಅಭಯನನ್ದಿಪಣ್ಡಿತದೇವರ್ ॥

ಗುಣಕೀರ್ತಿಮುನಿಯ (ಗುಣಚಂದ್ರಮುನಿ) ಶಿಷ್ಯನಾದ ಅಣ್ಣಿಗೇರಿಯ ಅಭಯನಂದಿಪಂಡಿತದೇವನು ಶ್ರುತದಲ್ಲಿ ಮತ್ತು ಚಾರಿತ್ರದಲ್ಲಿ ಅಗ್ಗಳಿಕೆಯುಳ್ಳವನಾಗಿದ್ದನು. ಈತನು ಕುಪಣದಲ್ಲಿ (ಇಂದಿನ ಕೊಪ್ಪಳ) ಸನ್ಯಾಸವನ್ನು ಸ್ವೀಕರಿಸಿ ಸಮಾಧಿಮರಣವನ್ನಪ್ಪಿದನು. ಈತನ ಪರೋಕ್ಷ ವಿನಯಾರ್ಥವಾಗಿ ಸರ್ವೋದಯ ಚಕ್ರವರ್ತಿ ಜಿನಚಂದ್ರಪಂಡಿತದೇವನು ಭಕ್ತಿಯಿಂದ ನಿಷಿಧಿ ಶಾಸನವನ್ನು ಮಾಡಿಸಿದ ಪ್ರಸ್ತಾಪವಿದೆ.೩೦ ಕೊಪ್ಪಳದ ಕ್ರಿ.ಶ. ೧೦೦೮ರ ನಿಷಿಧಿ ಶಾಸನದಲ್ಲಿಯೂ–

ದೇಸಿಗಗಣ ಶ್ರೀಕೊಣ್ಡಕುನ್ದಾನ್ವಯಾಸ್ಪದಮಾಚಾರ್ಯ್ಯರವಾರ್ಯ್ಯ
ವೀರ್ಯ್ಯರನಘ ಚಾನ್ದ್ರಾಯಣಾಧೀ ಇಸರೊ ಪೊದವಿಟ್ದಿನ್ತವರಿಂ
ಬಟಿಕ್ಕೆ ಪಲರುಂ ಕರ್ಮ್ಮ ಕ್ಷಯಂಗೆಯ್ದರಾವುದನೆಂಬೆಂಬಟಿಕಿತ್ತ
ಸನ್ದ ರವಿಚನ್ದ್ರಾಚಾರ್ಯ್ಯರಿನ್ದೋಳಿಯೋಳ್ ಗುಣಸಾಗರ ಮುನಿ
ಪತಿಗಳ್ಗುಣಚನ್ದ್ರ ಮುನೀನ್ದ್ರರಭಯಣನ್ದಿ ಮುನೀನ್ದ್ರರ್ಗ್ಗಣ ದೀಪ
ಕರೆನಿಸಿದ ಮಾಘಣನ್ದಿಗಳ್ ನೆಗಟ್ದಿರ್ಬ್ಬರುಂ ಕ್ರಮದಿನ್ದಂ ॥

ಎಂದು ಅಭಯನಂದಿಮುನಿಯ ಬಣ್ಣನೆಯಿದೆ.೩೧ ಅದೇ ನಗರದ ಕ್ರಿ.ಶ. ೧೦೦೨ರ ನಿಷಿಧಿ ಶಾಸನದಲ್ಲಿ–

ಪುರುಷಾರ್ತ್ಥ ತ್ರಿತಯಮನಾವರಿಸಿ ಮಹಾ
ಪುರುಷನೆನಿಸಿ ಸತ್ಯಾದಿಗುಣಂ
ಬೆರಸಿ ಶಶಿ ವಿಶದಯಶಮೊಳವಿರೆ ಕೆಲ್ಲಂ
ಗೆಱೆಯ ರೇವಸೆಟ್ಟಿಯೆ ನೆಗಟ್ದಂ ॥
ಪರಮಾಪ್ತಂ ತನಗರ್ಹತ್ಪರ...ತ್ಪರನಭಯನನ್ದಿ
ಪಣ್ಡಿತದೇವರ್ಗುರು.....ಧಿಕಮೇ ॥
ಜಿನ............ಳ್ ನಿರ್ಮ್ಮಳಮಪ್ಪ ಜಿನ...............ಯೊಳೆ
ಜೈನ ಪೂಜೆಯೊಳೆ ಪೂಜ್ಯ ಜಿನೇಶ್ವರ ಶಾಸನ ಪ್ರಕಾ
ಶನದೊಳೆ ಪಾತ್ರದಾನ......ಸಂದೆಸಕಂ ಕಡೆಯೊಳ್ಸಮಾಧಿಭಾ
ವನೆಯೊಳೊದಿಂ ಬಳಂ ಪಡೆದದೇನೆಸೆದಿಟ್ದುದೊ ರೇವಸೆಟ್ಟಿಯೊಳ್ ॥
ದಾನಿ ಪರೋಪಕಾರಿ ಶುಚಿ ಧರ್ಮ್ಮಪರಂ ಸ್ಥಿರನೆಂಬ
ಪೆಂಪಿನುದ್ದಾನಿಯ ರೇವಸೆಟ್ಟಿ .........ಚ್ಚರಿಯಾಗೆ ಸಮಾಧಿಕಾಳದೊಳ್
ಪಾನಮಱು ತಿಂಗಳೆನೆ ಭಾವಿಸಿ ಚೈತ್ರಗೃಹಕ್ಕೆ ಗೇಹದಿಂ ತಾನೆ ಸಮನ್ತು
ಬನ್ದನಶನ ಬ್ರತದಿಂದದೆದೊಂದು ಪಕ್ಷಮುಂ ॥
ಅ..ತು ದಿವಸ....ಮಾರಾಧನೆಯಂ ಸಲೆ ಕೇಳ್ದು
ಕುಪಣದೊಳೆ ಜಿನಪದಮಂ ಮನದೊಳ್ನಿಲಿಸಿ ಸಮಾಹಿ....
ಮನಸ್ಕನಪವರ್ಗ ಮಾರ್ಗ್ಗಂಮಂ ಸಾಧಿಸಿದಂ ॥

ಕೆಲ್ಲಂಗೆರೆಯ (ಅರಸೀಕೆರೆಯ ತಾಲ್ಲೂಕಿನ ಕೆಲ್ಲಂಗೆರೆ) ರೇವಸೆಟ್ಟಿ ಮಹಾಪುರುಷನೆನಿಸಿ ಸತ್ಯಗುಣಗಳನ್ನು ಒಡಮೂಡಿಸಿಕೊಂಡು ಅಭಯನಂದಿಪಂಡಿತದೇವನ ಬಳಿ ಸಲ್ಲೇಖನ ವ್ರತವನ್ನು ಪಡೆದು ಅರವತ್ತು ದಿವಸ ಆರಾಧನೆಯನ್ನು ಕೇಳಿ, ಕುಪಣದಲ್ಲಿ (ಇಂದಿನ ಕೊಪ್ಪಳ) ಸಮಾಧಿಮರಣವನ್ನಪ್ಪಿದ ನಿರೂಪಣೆಯಿದೆ.೩೨ ಅದೇ ನಗರದ ಕ್ರಿ.ಶ. ೧೦೫೧ರ ನಿಷಿಧಿ ಶಾಸನದಲ್ಲಿ–

ಭೂಚಕ್ರಂ ಬೆಸೆಕೆಯ್ಯೆ ಸನ್ದ
ಮುನಿಬೃನ್ದಾಧೀಶ್ವರ.........ಕುನ್ದಾಚಾರ್ಯ್ಯಧೃತ
ಧೈರ್ಯ್ಯರಾರ್ಯ್ಯತೆಯಿನೆನಾಚಾ.......ಳ್ವರ್ಯ್ಯರ್ ॥
ಆಜೆಕೆಯ ಪೊಟಲೊಳ್ ಕೆಲ್ಲಂಗೆಱೆಯೊಳ್
ನೆಗಟ್ದಭಯನನ್ದಿಪಣ್ಡಿತದೇವರ್ ।
ಮೆ...ರ್ತ್ತರಮಂ ಶ್ರುತಮಂ ತಜೆಸಲವಂ
ಮಹಿಮೆಯ ಮ...ಮುನಿವರರೊಳ್ ॥

ಅಭಯನಂದಿಪಂಡಿತದೇವನು ಪ್ರಾಯಶಃ ಚಾತುರ್ಮಾಸದ (ವರ್ಷಾಯೋಗ) ಉದ್ದೇಶದಿಂದ ಕೆಲ್ಲಂಗೆರೆಯಲ್ಲಿ ನೆಲೆಸಿದ್ದನು ಮತ್ತು ಅವನ ಶಿಷ್ಯಪರಂಪರೆಯ ವರ್ಣನೆಯಿದೆ.೩೩

**೨.೧೦. ತ್ರಿಭುವನಚಂದ್ರದೇವ**

ಅಣ್ಣಿಗೇರಿಯ ಕ್ರಿ.ಶ. ೧೦೭೧–೭೨ರ ಶಾಸನದಲ್ಲಿ ಉಲ್ಲಿಖಿತ ತ್ರಿಭುವನಚಂದ್ರದೇವನು ನಂದಿಸಂಘದ ಬಳಗಾರಗಣ ಪರಂಪರೆಯವನು.೩೪ ಗದಗ ತಾಲ್ಲೂಕಿನ ಗಾವರವಾಡದ ಕ್ರಿ.ಶ. ೧೦೭೧–೭೧ರ ಶಾಸನದಲ್ಲಿಯೂ ಈ ಮುನಿಯ ಉಲ್ಲೇಖವಿದೆ.೩೫ ಕಲ್ಯಾಣದ ಚಾಳುಕ್ಯರ ಇಮ್ಮಡಿ ಸೋಮೇಶ್ವರನು ರಾಷ್ಟ್ರಕೂಟರ ಮುಮ್ಮಡಿ ಕೃಷ್ಣನ (ಕ್ರಿ.ಶ. ೯೩೯–೯೬೭) ಬಾವನಾದ ತಲಕಾಡಿನ ಗಂಗರ ಇಮ್ಮಡಿ ಬೂತುಗನಿಂದ (ಕ್ರಿ.ಶ. ೯೩೮–೯೬೨)–

ಶ್ರೀವಸುದೇಶನ ಬಾವಂ
ರೇವಕನಿರ್ಮ್ಮಡಿಯ ವಲ್ಲಭಂ ಬೂತುಗನಾ
ತ್ಮಾವಗತ ಸಕಳಶಾಸ್ತ್ರನಿ
ಳಾವಿಶ್ರುತಕೀರ್ತ್ತಿ ಗಂಗಮಣ್ಡಲನಾಥಂ ॥
ರೂಡಿಗೆ ರೂಡಿವೆತ್ತೆಸೆದ ಬೆಳ್ವಲದೇಶಮನಾಳ್ದ ಗಂಗಪೆ
ರ್ಮ್ಮಾಡಿಗಳಿಂದ ಮಣ್ಣಿಗೆಱೆ ನಾಳ್ಕೆಱೆ ವಟ್ಟೆನಿಸಿತ್ತು ನಾಡನಾ
ಡಾಡಿಗಳುಂಬಮೆಂಬಿನೆಗಮಾ ಪುರದೊಳು ಜಯದುತ್ತರಂಗ ಪೆ
ರ್ಮ್ಮಾಡಿಯಿನಾಯ್ತು ಬೂತುಗನರೇನ್ದ್ರನಿನಲ್ಲಿ ಜಿನೇಂದ್ರ ಮಂದಿರಂ ॥

ಅಣ್ಣಿಗೇರಿಯಲ್ಲಿ ಕ್ರಿ.ಶ. ೯೬೧ರಲ್ಲಿ ನಿರ್ಮಾಣವಾಗಿದ್ದ ಗಂಗಪೆರ್ಮಾಡಿ ಶಾಂತಿನಾಥ ಬಸದಿಗೆ ತನ್ನ ಆಳ್ವಿಕೆಯ ಸಂದರ್ಭದಲ್ಲಿ (ಕ್ರಿ.ಶ. ೧೦೭೧) ಕಳುಹಿಸಿದ್ದ ದಾನ ತಾಮ್ರಶಾಸನವನ್ನು ಮಹಾಮಂಡಳೇಶ್ವರ ಲಕ್ಷ್ಮರಸನು ತ್ರಿಭುವನಚಂದ್ರದೇವನ ಸನ್ನಿಧಿಗೆ ಧಾರಾಪೂರ್ವಕವಾಗಿ ಒಪ್ಪಿಸಿಕೊಟ್ಟನು. ಜೊತೆಗೆ ತಾನೂ ಕೆಲವು ದಾನ–ದತ್ತಿಗಳನ್ನು ಕೊಟ್ಟನು. ಕಲ್ಯಾಣದ ಚಾಳುಕ್ಯರ ಅಧೀನದಲ್ಲಿ ಬೆಳ್ವೊಲ ಮುನ್ನೂರು ಆಡಳಿತ ವಿಭಾಗದ ಅಧಿಪತ್ಯವನ್ನು ನೋಡಿಕೊಳ್ಳುತ್ತಿದ್ದ ನವಲಗುಂದದ ಕತ್ತಲೆಕುಲದ ಮಹಾಸಾಮಂತ ಕಾಟರಸನು ಕ್ರಿ.ಶ. ೧೦೭೨ರಲ್ಲಿ ಗಂಗಪೆರ್ಮಾಡಿ ಬಸದಿಯ ದಾನಶಾಲೆಗೆ ತನ್ನ ಆಳ್ವಿಕೆಯ ಗಾವರವಾಡ ಗ್ರಾಮದಲ್ಲಿ ಐವತ್ತು ಮತ್ತರು ಭೂಮಿಯನ್ನು ತ್ರಿಭುವನಚಂದ್ರದೇವನ ಸನ್ನಿಧಿಯಲ್ಲಿ ಧಾರಾಪೂರ್ವಕವಾಗಿ ದಾನ ಮಾಡಿದ್ದಾನೆ.೩೬

**೨.೧೧. ಉದಯಚಂದ್ರಸಿದ್ಧಾಂತದೇವ**

ಅಣ್ಣಿಗೇರಿಯ ಕ್ರಿ.ಶ. ೧೦೭೧–೭೨ರ ಶಾಸನದಲ್ಲಿ ಉಲ್ಲಿಖಿತ ಉದಯಚಂದ್ರಸಿದ್ಧಾಂತದೇವನು ನಂದಿಸಂಘದ ಬಳಗಾರಗಣ ಪರಂಪರೆಯವನು.೩೭ ಗದಗ ತಾಲ್ಲೂಕಿನ ಗಾವರವಾಡದ ಕ್ರಿ.ಶ. ೧೦೭೧–೭೧ರ ಶಾಸನದಲ್ಲಿಯೂ ಈ ಮುನಿಯ ಉಲ್ಲೇಖವಿದೆ.೩೮ ಈತನು–

ಸ್ವಸ್ತಿ ಸಮಸ್ತವಿನಮದಮರ ಮಕುಟತಟ ಘಟಿತ
ಶೋಣ ಮಾಣಿಕ್ಯ ಮೌಕ್ತಿಕ ಮಯೂಖ ಕುಂಕುಮ
ಮಳಯಜಾಭ್ಯರ್ಚ್ಚಿತ ಶ್ರೀಮದರ್ಹತ್ಪರಮೇಶ್ವರ ಪ್ರಣೀತ
ಪರಮಾಗಮ ವಿಶಾರದಮನವರತ ಪರಮಾಗ
ಮೋಪದೇಶ ಪ್ರಸಂಗರುಮಪ್ಪ ಶ್ರೀಮದ್
ಉದಯಚಂದ್ರಸೈದ್ಧಾಂತದೇವರ......

ತೀರ್ಥಂಕರರ ಉಪದೇಶಗಳು ಮತ್ತು ಜೈನ ಸಿದ್ಧಾಂತ–ಶಾಸ್ತ್ರಗಳಲ್ಲಿ ನಿಪುಣನಾಗಿದ್ದನು. ಯಾವಾಗಲೂ ಉತ್ತಮ ಧರ್ಮಮಾರ್ಗವನ್ನು ಉಪದೇಶ ಮಾಡುವುದರಲ್ಲಿ ನಿರತನಾಗಿದ್ದನು. ಶ್ರವಣಬೆಳಗೊಳದ ಕ್ರಿ.ಶ. ೧೧೭೬ರ ಶಾಸನದಲ್ಲಿ–

ನೈಯಾಯಿಕೇಭಸಿಂಹೋ ಮೀಮಾಂಸಕ
ತಿಮಿರನಿಕರನಿರಸನತಪನಃ
ಬೌದ್ಧವನದಾವದಹನೋ ಜಯತಿ
ಮಹಾನುದಯಚಂದ್ರಪಂಡಿತದೇವಃ ॥

'ನೈಯಾಯಿಕರಿಗೆ ಸಿಂಹಪ್ರಾಯನೂ, ಮೀಮಾಂಸ ತಿಮಿರಕ್ಕೆ ಪ್ರಭಾಕರನೂ, ಬೌದ್ಧ ವನಕ್ಕೆ ಕಾಳ್ಗಿಚ್ಚೂ ಆದ ಉದಯಚಂದ್ರಪಂಡಿತದೇವನು ಚಂದ್ರಕೀರ್ತಿಯ ಸಹಪಾಠಿ' ಎಂದು ನಿರೂಪಣೆಯಿದೆ.೩೯ ಪ್ರಸ್ತುತ ಶಾಸನೋಕ್ತ

ಉದಯಚಂದ್ರಪಂಡಿತ ಮತ್ತು ಅಣ್ಣಿಗೇರಿ, ಗಾವರವಾಡ ಶಾಸನಗಳೋಕ್ತ ಉದಯಚಂದ್ರಸಿದ್ಧಾಂತದೇವ ಇಬ್ಬರೂ ಒಬ್ಬನೇ ಆಗಿರುವಂತೆ ತೋರುತ್ತದೆ.

**೨.೧೨. ಸಕಳಚಂದ್ರದೇವ**

ಅಣ್ಣಿಗೇರಿಯ ಕ್ರಿ.ಶ. ೧೦೭೧-೭೨ರ ಶಾಸನದಲ್ಲಿ ಉಲ್ಲಿಖಿತ ಸಕಳಚಂದ್ರದೇವನು ನಂದಿಸಂಘದ ಬಳಗಾರಗಣ ಪರಂಪರೆಯವನು.೪೦ ಗದಗ ತಾಲ್ಲೂಕಿನ ಗಾವರವಾಡದ ಕ್ರಿ.ಶ. ೧೦೭೧-೭೧ರ ಶಾಸನದಲ್ಲಿಯೂ ಈ ಮುನಿಯ ಉಲ್ಲೇಖವಿದೆ.೪೧ ಈ ಮೇಲಿನ ಉದಯಚಂದ್ರ ಸಿದ್ಧಾಂತದೇವನ ಶಿಷ್ಯನಾದ ಇವನು–

ಶ್ರೀಮದ್ ಉದಯಚಂದ್ರಸೈದ್ಧಾಂತದೇವರ ದಿವ್ಯಶ್ರೀ
ಪಾದಪದ್ಮಾರಾಧಕರುಂ ಶ್ರೀಮದ್ ಬಳಾತ್ಕಾರಗಣಾಂಬುಜ
ಸರೋವರರಾಜಹಂಸರುಮಪ್ಪ ಶ್ರೀಮತ್ ಸಕಳಚಂದ್ರದೇವರು
ಶ್ರೀಮದ್ರಾಜಧಾನಿ ಬಟ್ಟಣ ಮಣ್ಣಿಗೇಱೆಯ ಮಹಾಸ್ಥಾನಂ
ಶ್ರೀಮದ್ ಗಂಗಪೆರ್ಮ್ಮಾಡಿಯ ಬಸದಿಗಾಳ್ವ ಗ್ರಾಮಾದಿವಾಡದಲು
ಯಾಚಾರ್ಯ್ಯರುಂ.................

ಬಲತ್ಕಾರಗಣ ಎಂಬ ತಾವರೆಗಳಿರುವ ಕೊಳದಲ್ಲಿ ರಾಜಹಂಸದಂತೆ ಪ್ರಸಿದ್ಧನಾಗಿದ್ದನು. ಈತನು ಅಣ್ಣಿಗೇರಿಯ ಗಂಗಪೆರ್ಮಾಡಿ ಬಸದಿಯ ಸ್ಥಾನಾಚಾರ್ಯನಾಗಿದ್ದನು. ಪ್ರಸ್ತುತ ಬಸದಿಯ ಪೂಜೆ-ಪುನಸ್ಕಾರಗಳು, ಮುನಿಗಳ ಆಹಾರದಾನ, ಬಸದಿಯ ಪುರೋಹಿತರ ಉಪಜೀವನಕ್ಕೆ ಅಣ್ಣಿಗೇರಿ ಧರ್ಮಾಡಳಿತ ಪ್ರದೇಶಕ್ಕೊಳಪಟ್ಟಿದ್ದ ಗ್ರಾಮಗಳಲ್ಲಿನ ಜೈನ ಮತ್ತು ಜೈನೇತರ ಅನೇಕ ಅಧಿಕಾರಿಗಳು, ವರ್ತಕರು ಮತ್ತು ಪ್ರಜೆಗಳು ಸಕಳಚಂದ್ರದೇವನ ಸನ್ನಿಧಿಯಲ್ಲಿ ಭೂಮಿ, ಮನೆ, ಭೋಗವಾಡಗೆ (ಅನುಭವಿಸಲು ಕೊಡಬೇಕಾದ ಬಾಡಿಗೆ), ಗದ್ಯಾಣ ಮೊದಲಾದ ದಾನ-ದತ್ತಿಗಳನ್ನು ಕೊಟ್ಟಿದ್ದಾರೆ.

**೨.೧೩. ನೇಮಿಚಂದ್ರ ಭಟ್ಟಾರಕದೇವ**

ಅಣ್ಣಿಗೇರಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಪಾದಪೀಠ ಶಾಸನದಲ್ಲಿ–

ಶ್ರೀ ನವಿಲ್ಗುಂದಾನ್ವಯದ ನೇಮಿಚಂದ್ರ ಭಟ್ಟಾರಕದೇವರ
ಪ್ರಿಯ ಶಿಷ್ಯರು ಕನಕನಂದಿಪಂಡಿತ ದೇವರು ಮಾಡಿಸಿದ
ಸುಮತಿತೀರ್ಥಂಕರರ ಪ್ರತಿಮೆ ಮಂಗಳ ಮಹಾಶ್ರೀ ಶ್ರೀ ಶ್ರೀ ॥

ನವಿಲ್ಗುಂದಾನ್ವಯ ಪರಂಪರೆಯ ನೇಮಿಚಂದ್ರ ಭಟ್ಟಾರಕದೇವನ ನಿರೂಪಣೆಯಿದೆ.೪೨ ಈತನು ನವಲಗುಂದ ಪಟ್ಟಣದಲ್ಲಿದ್ದ ಜೈನ ಮಠದ ಪಟ್ಟಾಚಾರ್ಯನಾಗಿದ್ದಂತೆ ತೋರುತ್ತದೆ.

**೨.೧೪. ಕನಕನಂದಿಪಂಡಿತದೇವ**

ಅಣ್ಣಿಗೇರಿಯ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಪಾದಪೀಠ ಶಾಸನದಲ್ಲಿ ಉಲ್ಲಿಖಿತ ಕನಕನಂದಿಪಂಡಿತದೇವನು ನವಿಲ್ಗುಂದಾನ್ವಯ ಪರಂಪರೆಯವನು. ಈ ಮೇಲಿನ ನೇಮಿಚಂದ್ರ ಭಟ್ಟಾರಕದೇವನ ಪ್ರೀತಿಯ ಶಿಷ್ಯನಾದ ಇವನು ಸುಮತಿನಾಥ ತೀರ್ಥಂಕರನ ಶಿಲ್ಪವನ್ನು ಮಾಡಿಸಿದ್ದಾನೆ.೪೩ ಈ ಶಿಲ್ಪವು ಈಗ ಅಣ್ಣಿಗೇರಿಯ ಪಾರ್ಶ್ವನಾಥ (ಗಂಗಪೆರ್ಮಾಡಿ) ಬಸದಿಯಲ್ಲಿ ಪ್ರತಿಷ್ಠಾಪಿತವಾಗಿದೆ.

**೨.೧೫. ಸೋಮದೇವ ಆಚಾರ್ಯ**

ಅಣ್ಣಿಗೇರಿಯ ಕ್ರಿ.ಶ. ೧೨೬೩ರ ನಿಷಿಧಿ ಶಾಸನದಲ್ಲಿ–

ಸ್ವಸ್ತಿಶ್ರೀ ಸಕವರ್ಷ ೧೧೮೯ ಸಂದ ಪ್ರಭವ ಸಂವತ್ಸರದ ಚೈತ್ರ
ಬಹುಳ ಚವತಿ ಮಂಗಳವಾರದಂದು ಶ್ರೀಮೂಲಸಂಘದ
ಕೊಂಡಕುಂದಾನ್ವಯದ ಸೋಮದೇವಾಚಾರ್ಯರ ಗುಡ್ಡಿಗ
ನೋಂಪಿಸೆಟ್ಟಿಯ ಮಗ ವೀರಯ್ಯನ ಹೆಂಡತಿ ಆ ಕೆಳದಿಅವ್ವೆ
ಸಮಾಧಿಯಿಂ ಶರೀರತ್ಯಾಗಮಂ ಮಾಡಿ ಸ್ವರ್ಗಸ್ಥೆಯಾದ
ಪರೋಕ್ಷದ
ನಿಶಿಧಿ ಮಂಗಳ ಮಹಾ ಶ್ರೀ ಶ್ರೀ ಶ್ರೀ ॥

ಮೂಲಸಂಘದ ಕೊಂಡಕುಂದಾನ್ವಯ ಪರಂಪರೆಯ ಸೋಮದೇವ ಆಚಾರ್ಯನ ಪ್ರಸ್ತಾಪವಿದೆ. ಈತನ ಶಿಷ್ಯ ನೋಂಪಿಸೆಟ್ಟಿಯ ಪುತ್ರ ವೀರಯ್ಯನ ಧರ್ಮಪತ್ನಿ ಕೆಳದಿಯವ್ವೆ ಸಲ್ಲೇಖನ ವ್ರತವನ್ನು ಸ್ವೀಕರಿಸಿ ಸಮಾಧಿಮರಣದಿಂದ ಶರೀರತ್ಯಾಗ ಮಾಡಿ ಸ್ವರ್ಗವನ್ನು ಪಡೆದಿದ್ದಾಳೆ.೪೪

**೨.೧೬. ಮಲಧಾರಿಸ್ವಾಮಿ**

ಕೊಪ್ಪಳದ ಕ್ರಿ.ಶ. ಸುಮಾರು ೧೧ನೆಯ ಶತಮಾನದ ನಿಷಿಧಿ ಶಾಸನದಲ್ಲಿ–

..........ತಿಯತ ಕಟಾಕ್ಷ ಬಾಣಹತಿಯಿಂದ ನೋ...ಹೃದಯದಳಿತ
ಪಸಿಗಳಾಂ ಬ್ರತಿಯೆಂಬೆನೆನಯಕೀರ್ತ್ತಿಬ್ರತಿನಾಥನೊಳ್ ತನುದೇಹ
ದಾವಾನಳನೊಳ್ ॥ ತಚ್ಛಿಷ್ಯ । ಅಣ್ಣಿಗೆಱೆಯ ಮಲಧಾರಿಸ್ವಾಮಿಗಳು
ಅರಸಿಯಬೀಡಿನ ನೇಮಿಚಂದ್ರಪಂಡಿತರುಗಳದೇವರು
ಮೇಘಚಂದ್ರ
ಭಟ್ಟಾರಕರು ಶ್ರುತಕೀರ್ತ್ತಿಭಟ್ಟಾರಕರು ಶ್ರುತಕೀರ್ತ್ತಿದೇವ................

ತ್ರೈವಿದ್ಯದಾಮನಂದಿಯ ಶಿಷ್ಯ ಪರಂಪರೆಯ (ನಯಕೀರ್ತಿಮುನಿ, ಅರಸಿಬೀದಿಯ ನೇಮಿಚಂದ್ರಪಂಡಿತದೇವ, ಮೇಘಚಂದ್ರ ಭಟ್ಟಾರಕ, ಶ್ರುತಕೀರ್ತಿ ಭಟ್ಟಾರಕ) ವಿವರಣೆಯಲ್ಲಿ ಅಣ್ಣಿಗೇರಿಯ ಮಲಧಾರಿಸ್ವಾಮಿಯ ನಿರೂಪಣೆಯಿದೆ.೪೫ ಈತನನ್ನು ಶ್ರವಣಬೆಳಗೊಳದ ಕ್ರಿ.ಶ. ೧೧೭೬ರ ಶಾಸನವು–

ಕಂದರ್ಪ್ಪಾಹವಕಳ್ಪಿತೋದ್ಧುರತನುತ್ರಾಣೋ ಪಮೋರಸ್ಥಳೀ
ಚಂಚದ್ಭೂರಮಳಾವಿನೇಯಜನತಾನೀರೇಜಿನೀಭಾವನಃ ತ್ಯಕ್ತಾ
ಶೇಷಬಹಿರ್ವ್ವಿಕಳ್ಪನಿಚಯಾಶ್ಚಾರಿತ್ರ ಚಕ್ರೇಶ್ವರಾಃ ಶುಂಭಂತ್ಯ
ಣ್ಣಿತಟಾಕವಾಸಿ ಮಲಧಾರಿಸ್ವಾಮಿನೋ ಭೂತಳೇ ॥

'ಶಿಷ್ಯ ಸಂಕುಲವೆಂಬ ಕಮಲವನಕ್ಕೆ ಮಾರ್ತಾಂಡನೂ (ಸೂರ್ಯ), ಚಾರಿತ್ರ ಚಕ್ರವರ್ತಿಯೂ, ಲೌಕಿಕವಿದೂರನೂ, ಅಣ್ಣಿತಟಾಕವಾಸಿಯೂ (ಇಂದಿನ ಅಣ್ಣಿಗೇರಿ) ಆದ ಮಲಧಾರಿಸ್ವಾಮಿ ನಯಕೀರ್ತಿಯ ಸದ್ಧರ್ಮನಾಗಿದ್ದನು (ಸೋದರ ಸನ್ಯಾಸಿ)' ಎಂದೆಲ್ಲ ಬಣ್ಣಿಸಿದೆ.೪೬

**೨.೧೭. ಲಕ್ಷ್ಮಿಸೇನ ಭಟ್ಟಾರಕ ಪಟ್ಟಾಚಾರ್ಯ ಸ್ವಾಮೀಜಿ**

ಅಣ್ಣಿಗೇರಿಯ ಕ್ರಿ.ಶ. ೧೯೪೫ರ ಶಾಸನದಲ್ಲಿ–

ಅಂಣೀಗೇರಿ ಶ್ರೀ ೧೦೦೮ ಶಾಂತಿನಾಥ ತೀರ್ಥಂಕರ
ಚೈತ್ಯಾಲಯದಲ್ಲಿ ಶ್ರೀ ೧೦೦೮ ಶ್ರೀ ಪಾರ್ಶ್ವನಾಥ ತೀರ್ಥಂಕರ
ಪ್ರಾಚೀನ ಜಿನಬಿಂಬವನ್ನು ಜೀರ್ಣೋದ್ಧಾರ ಮಾಡಿ ಕೊಲ್ಲಾಪೂರ
ಶ್ರೀ ಲಕ್ಷ್ಮಿಸೇನ ಭಟ್ಟಾರಕ ಪಟ್ಟಾಚಾರ್ಯ ಸ್ವಾಮಿಯವರ ಹಸ್ತದಿಂದ
ಶ್ರೀಮಂತ ಭೀಮಪ್ಪಯ್ಯ ದೇಶಪಾಂಡೆಯವರ ತ್ರತಿಯಾ

ಧರ್ಮ್ಮಪತ್ನಿಯಾದ ಶ್ರೀ ಪುಷ್ಪಾವತೀಬಾಯಿ ದೇಶಪಾಂಡೆ
ಅಂಣಿಗೇರಿ ಇವರು ಶಕೆ ೧೮೬೭ನೇ ಪಾರ್ದಿವನಾಮ ಸಂವತ್ಸರದ
ಮಾರ್ಗಶಿರ ॥ ಶುದ್ಧ ॥ ದಶಮಿ ॥ ಶುಕ್ರವಾರ ದಿವಸ
ಪಂಚಕಲ್ಯಾಣಪೂರ್ವಕ ಪ್ರತಿಷ್ಠಾ ಮಾಡಿಸಿದರು ॥

ಕೊಲ್ಲಾಪುರದ ಲಕ್ಷ್ಮೀಸೇನ ಭಟ್ಟಾರಕ ಪಟ್ಟಾಚಾರ್ಯ ಸ್ವಾಮಿಗಳ ಪ್ರಸ್ತಾಪವಿದೆ.೪೭ ಕೊಲ್ಲಾಪುರದ ಭಟ್ಟಾರಕ ಪೀಠವು ಶ್ರೀಮೂಲ-ಸೇನಸಂಘದ ಸೇನಗಣದ ಪುಷ್ಕರಗಚ್ಛದ ಪಂಚಸ್ತೂಪಾನ್ವಯ ಪರಂಪರೆಯದಾಗಿದೆ. ಈ ಪೀಠವು ತಮಿಳುನಾಡಿನ ಜೈನ ಮುನಿಯೊಬ್ಬರಿಂದ ದೆಹಲಿಯಲ್ಲಿ ಸ್ಥಾಪನೆಯಾಯಿತು. ನಂತರದಲ್ಲಿ ಧರ್ಮಪ್ರಸಾರಕ್ಕಾಗಿ ಕೊಲ್ಲಾಪುರ, ಪೆನುಗೊಂಡೆ, ಜಿನಕಂಚಿಗಳಲ್ಲಿ ಶಾಖೆಗಳು ಸ್ಥಾಪನೆಯಾದವು. ಕಾಲಾಂತರದಲ್ಲಿ ಕೊಲ್ಲಾಪುರದ ಪೀಠವು ಪ್ರಧಾನ ಸ್ಥಾನಮಾನ ಪಡೆದು ಸಂಸ್ಥಾನ ಮಠ ಎಂಬ ಅಭಿದಾನ ಪಡೆಯಿತು. ಕಾಲಕ್ರಮೇಣ ರಾಯಬಾಗ, ಹೊಸೂರು (ಬೆಳಗಾವಿ) ಮೊದಲಾದೆಡೆಗಳಲ್ಲಿ ಶಾಖಾಮಠಗಳನ್ನು ಪ್ರಾರಂಭಿಸಿ, ಜೈನ ಧರ್ಮದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಪ್ರಸ್ತುತ ಶಾಸನೋಕ್ತ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಪಟ್ಟಾಚಾರ್ಯ ಸ್ವಾಮಿಗಳು (೧೮೯೬-೧೯೬೫) ಕೊಲ್ಲಾಪುರದ ಭಟ್ಟಾರಕ ಪೀಠದ ೨೭ನೆಯ ಪೀಠಾಧಿಪತಿಗಳಾಗಿದ್ದರು. ಅವರು ಶಾಸ್ತ್ರ, ಸಿದ್ಧಾಂತ, ದರ್ಶನ, ಸಾಹಿತ್ಯ, ಭಾಷೆ, ಜ್ಯೋತಿಷ್ಯ ಮೊದಲಾದ ವಿಷಯಗಳಲ್ಲಿ ಪಾರಂಗತರಾಗಿದ್ದರು. ಅವರು ೧೯೧೬ರಲ್ಲಿ ಭಟ್ಟಾರಕ ದೀಕ್ಷೆ ಪಡೆದು ಮಠದ ಪೀಠಾಧಿಪತಿಗಳಾಗಿ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅನೇಕ ಮಹತ್ವಪೂರ್ಣ ಚಟುವಟಿಕೆಗಳನ್ನು ಕೈಗೊಂಡಿದ್ದಾರೆ.೪೮ ಕನ್ನಡದ ಆದಿಕವಿ ನಾಡೋಜ ಪಂಪನ ಸಹೋದರ ಜಿನವಲ್ಲಭನ ವಂಶಸ್ಥರಾದ ಅಣ್ಣಿಗೇರಿಯ ದೇಶಪಾಂಡೆ ಮನೆತನದವರು ಕೊಲ್ಲಾಪುರದ ರಾಜ ಮನೆತನಗಳೊಂದಿಗೆ ಸಂಬಂಧಗಳನ್ನು ಬೆಳೆಸಿದ ತರುವಾಯ, ಅಲ್ಲಿಯ ಲಕ್ಷ್ಮೀಸೇನ ಭಟ್ಟಾರಕ ಮಠದೊಂದಿಗೆ ಇವರ ಒಡನಾಟ ಬೆಳೆಯಿತು. ಹಾಗಾಗಿ ಈ ದೇಸಾಯಿಗಳು ಕೈಗೊಳ್ಳುತ್ತಿದ್ದ ಧಾರ್ಮಿಕ ಕಾರ್ಯಕ್ರಮಗಳಿಗೆ ಅಲ್ಲಿಯ ಭಟ್ಟಾರಕರನ್ನು ಬರಮಾಡಿಕೊಳ್ಳುವುದು ಪ್ರಾರಂಭವಾಯಿತು.

ಅಣ್ಣಿಗೇರಿಯಲ್ಲಿ ತಲಕಾಡಿನ ಗಂಗರ ಇಮ್ಮಡಿ ಬೂತುಗನು (ಕ್ರಿ.ಶ. ೯೩೮-೯೬೨) ಕ್ರಿ.ಶ. ೯೬೧ರಲ್ಲಿ ನಿರ್ಮಿಸಿದ್ದ ಗಂಗಪೆರ್ಮಾಡಿ ಬಸದಿಯ ಮೂಲನಾಯಕ ಶಾಂತಿನಾಥ ತೀರ್ಥಂಕರನ ಶಿಲ್ಪವು ತ್ರುಟಿತವಾಗಿದ್ದಿತ್ತು. ಈ ಬಸದಿಯ ಆವರಣದಲ್ಲಿ ೧೯೪೦ರಲ್ಲಿ ಯಾವುದೋ ಕಾರ್ಯಕ್ಕಾಗಿ ಅಗೆಯುತ್ತಿದ್ದ ಸಂದರ್ಭದಲ್ಲಿ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಪಾರ್ಶ್ವನಾಥ ತೀರ್ಥಂಕರನ ಶಿಲ್ಪ ಬೆಳಕಿಗೆ ಬಂದಿತು. ಈ ಶಿಲ್ಪವು ಸುಂದರವೂ, ಪೂಜೆಗೆ ಅರ್ಹವೂ ಆಗಿದ್ದಿತ್ತು. ಗಂಗಪೆರ್ಮಾಡಿ ಬಸದಿಯ ಮೂಲನಾಯಕ ಶಾಂತಿನಾಥ ತೀರ್ಥಂಕರನ ತ್ರುಟಿತ ಶಿಲ್ಪವು ಪೂಜೆಗೆ ಅನರ್ಹವಾಗಿದ್ದಿತ್ತು. ಹಾಗಾಗಿ ದೇಶಪಾಂಡೆ ಮನೆತನದ ಭೀಮಪ್ಪಯ್ಯ ಅವರ ೩ನೆಯ ಧರ್ಮಪತ್ನಿ ಪುಷ್ಪಾವತಿಬಾಯಿ (೧೯೦೧-೧೯೬೧) ಅವರು ತ್ರುಟಿತ ಶಾಂತಿನಾಥ ತೀರ್ಥಂಕರನ ಶಿಲ್ಪವನ್ನು ಬಸದಿಯ ಹೊರಗಿಟ್ಟು, ಹೊಸದಾಗಿ ಬೆಳಕಿಗೆ ಬಂದ ಪ್ರಾಚೀನ ಪಾರ್ಶ್ವನಾಥ ತೀರ್ಥಂಕರನ ಶಿಲ್ಪವನ್ನು ೧೯೪೧ರಲ್ಲಿ ಜೀರ್ಣೋದ್ಧಾರಪಡಿಸಿ (ವಜ್ರಲೇಪನ) ೧೯೪೫ರಲ್ಲಿ ಈ ಮೇಲಿನ ಕೊಲ್ಲಾಪುರದ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಪಟ್ಟಾಚಾರ್ಯ ಸ್ವಾಮೀಜಿಗಳ ನೇತೃತ್ವದಲ್ಲಿ ಪಂಚಕಲ್ಯಾಣಪೂರ್ವಕವಾಗಿ ಬಸದಿಯ ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಿದರು.

### ೨.೧೮. ಆಚಾರ್ಯ ಪಾಯಸಾಗರರು

ಅಣ್ಣಿಗೇರಿಯ ಪಾರ್ಶ್ವನಾಥ ಬಸದಿಯ ಬಲಬದಿಯ (ದಕ್ಷಿಣಭಾಗ) ಪ್ರಾಕಾರದ ಭಿತ್ತಿಯಲ್ಲಿರುವ ಕ್ರಿ.ಶ. ೧೯೪೧ರ ಮೇ ೧೨ರ ಶಾಸನದಲ್ಲಿ_

ಶ್ರೀ ಜಿನಮಂದಿರದ ದಕ್ಷಿಣ ಭಾಗದ ಗೋಡೆಯನ್ನು
ರಾ। ರಾ। ಚಂದ್ರಪ್ಪಾ ದೇವಪ್ಪ ಬಸ್ತಿ ಉಪಾಧ್ಯೆಯ
ಅಂಣಿಗೇರಿ ಇವರು ಕಟ್ಟಿಸಿರುತ್ತಾರೆ ಮಹಾವೀರ ಶಕೆ
೨೪೬೭ ಸನ್ ತಾ। ೧೨/೫/೧೯೪೧ ಇಸ್ವಿ ಶ್ರೀ ೧೦೮
ದಿಗಂಬರ ಮುನಿ ಪಾಯಸಾಗರರು ಬಂದ ಕಾಲಕೆ

ಆಚಾರ್ಯಶ್ರೀ ೧೦೮ ದಿಗಂಬರ ಮುನಿ ಪಾಯಸಾಗರರು ೧೯೪೧ರ ಮೇ ೧೨ರಂದು ವಿಹಾರ ಕೈಗೊಂಡು ಅಣ್ಣಿಗೇರಿಗೆ ಆಗಮಿಸಿದ್ದ ಸಂದರ್ಭದಲ್ಲಿ, ಈ ಜಿನಮಂದಿರದ (ಬಸದಿ) ದಕ್ಷಿಣ ಭಾಗದ ಗೋಡೆಯನ್ನು ಅಣ್ಣಿಗೇರಿಯ ಚಂದ್ರಪ್ಪ ದೇವಪ್ಪ ಬಸ್ತಿ (ಬಸದಿಯ ಉಪಾಧ್ಯೆಯರು / ಪಂಡಿತರು) ಅವರು ಕಟ್ಟಿಸಿದರು ಎಂಬ ನಿರೂಪಣೆಯಿದೆ.೪೯ ಅಣ್ಣಿಗೇರಿಯ ಪಾರ್ಶ್ವನಾಥ ಬಸದಿಯ ಗರ್ಭಗೃಹದಲ್ಲಿರುವ ಕ್ರಿ.ಶ. ಸುಮಾರು ೧೧ನೆಯ ಶತಮಾನದ ಪಾರ್ಶ್ವನಾಥ ತೀರ್ಥಂಕರನ ಶಿಲ್ಪದ ಹಿಂಭಾಗದಲ್ಲಿರುವ ಕ್ರಿ.ಶ. ೧೯೪೧ರ ಅಕ್ಟೋಬರ ೧ರ ಶಾಸನದಲ್ಲಿ_

ತಾ-೧-೧೦-೧೯೪೧ ಇಸ್ವಿ
ಪಾಯಸಾಗರ ಸಿಷ್ಯ ವೀರಪ್ಪಾ
ಸಿಲ್ಪಾಚಾರ್ಯ್ಯ ಕೃತ

ಕ್ರಿ.ಶ. ೧೯೪೧ರ ಅಕ್ಟೋಬರ್ ೧ರಂದು ಪಾಯಸಾಗರರ ಶಿಷ್ಯ ವೀರಪ್ಪ ಎಂಬಾತ ಶಿಲ್ಪಾಚಾರ್ಯನು ಈ ಶಿಲ್ಪವನ್ನು ಜೀರ್ಣೋದ್ಧಾರ (ವಜ್ರಲೇಪನ) ಮಾಡಿದನು ಎಂಬ ವಿವರವಿದೆ.೫೦

ಪಾಯಸಾಗರ ಮುನಿಗಳು ಬೆಳಗಾವಿ ಜಿಲ್ಲೆಯ ಗೋಕಾಕ ನಗರದ ಡೋಂಗರೆ ಮನೆತನದ ರಾಮಚಂದ್ರಪ್ಪ ಮತ್ತು ಶ್ರೀಮಂತಿ ದಂಪತಿಗಳ ಉದರದಲ್ಲಿ ೧೮೮೯ರ ಮಾರ್ಚ್ ೭ರಂದು ಜನಿಸಿದರು.೫೧ ಇವರ ಜನನವು ತಾಯಿಯ ತವರೂರಾದ ಅಥಣಿ ತಾಲ್ಲೂಕಿನ ಐನಾಪುರ ಗ್ರಾಮದಲ್ಲಾಯಿತು. ತಂದೆ-ತಾಯಿ ಇವರಿಗೆ ಪೀತಾಂಬರ ಎಂದು ನಾಮಕರಣ ಮಾಡಿದರು. ೧೮೯೮ರಲ್ಲಿ ಪೀತಾಂಬರನ ತಂದೆ-ತಾಯಿ ಪ್ಲೇಗ ರೋಗಕ್ಕೆ ಬಲಿಯಾದರು. ಅನಾಥನಾದ ಬಾಲಕ ಪೀತಾಂಬರನು ಅಜ್ಜಿ ಪದ್ಮಾವತಿಯ ಆಸರೆಯಲ್ಲಿ ಬೆಳೆದನು. ಬಾಲ್ಯದಲ್ಲಿ ತುಂಬಾ ತುಂಟನಾದ ಈತನು ವಿದ್ಯಾಭ್ಯಾಸದಲ್ಲಿ ಅನಾಸಕ್ತಿಯನ್ನು ತಳೆದು ಯಾವುದರಲ್ಲಿಯೂ ಆಸಕ್ತಿಯಿಲ್ಲದೆ ವಿಶೇಷ ಗುಣಗಳನ್ನೇನೂ ಹೊಂದಿರಲಿಲ್ಲ. ಅಜ್ಜಿ ಈತನನ್ನು ಬೆಳಗಾವಿಯಲ್ಲಿ ತನ್ನ ಮಗಳ ಮನೆಯಲ್ಲಿಟ್ಟು ಶಾಲೆಗೆ ಕಳುಹಿಸಲು ಪ್ರಯತ್ನಿಸಿದ ಫಲವಾಗಿ ೨ನೆಯ ತರಗತಿವರೆಗೆ ಓದಿದನು. ತುಂಬಾ ಹಟಮಾರಿ, ಅಲೆಮಾರಿಯಾಗಿದ್ದ ಪೀತಾಂಬರನು ನಾಟಕದೆಡೆಗೆ ಆಕರ್ಷಿತನಾದನು. ೧೯೦೬ರಲ್ಲಿ ಗೋಕಾಕ ನಗರಕ್ಕೆ ಆಗಮಿಸಿದ ಕೊಣ್ಣೂರು ನಾಟಕ ಕಂಪನಿಯಲ್ಲಿ ಅಭಿನಯಿಸಲು ಅವಕಾಶ ಪಡೆದನಾದರೂ, ಅಕ್ಷರಜ್ಞಾನ ಇಲ್ಲದೆ ಸಂಭಾಷಣೆಗಳನ್ನು ಕಂಠಪಾಠ ಮಾಡಲು ಅಸಮರ್ಥನಾಗಿ ಕಂಪನಿಯಿಂದ ಹೊರಬಂದನು. ತನ್ನ ಮರಾಠಿ ಸ್ನೇಹಿತನೊಂದಿಗೆ ಮುಂಬಯಿಗೆ ಹೋಗಿ ಫ್ಯುಜಿಲ್ ಮಿಲ್‌ನಲ್ಲಿ ಕೆಲಸಕ್ಕೆ ಸೇರಿದನು. ಅಲ್ಲಿ ತನ್ನ

ಮೇಲಾಧಿಕಾರಿ ಮಹಾಂತಪ್ಪ ಮತ್ತು ಸುರಪೂರದ ವಿರುಪಾಕ್ಷಪ್ಪನ ಸಹವಾಸದಿಂದ ರಾಮಾಯಣ ಮತ್ತು ಮಹಾಭಾರತ ಕಾವ್ಯಗಳನ್ನು ತಿಳಿದುಕೊಂಡನು. ಇದರಿಂದ ಈತನಲ್ಲಿ ಜ್ಞಾನದಾಹದ ಮೊಳಕೆಯೊಡೆದು ಹೊಸ ಪರಿವರ್ತನೆ ಮೂಡಿತು. ಪುರಾಣಾದಿಗಳನ್ನು ಓದುತ್ತ ಭಜನಾ ಮಂಡಳಿಯನ್ನು ಕಟ್ಟಿಕೊಂಡು ಆಮೂಲಕ ಮಹಾಪುರುಷರ ಚರಿತ್ರೆಗಳನ್ನು ಜನಸಾಮಾನ್ಯರಿಗೆ ತಿಳಿಸಿಕೊಡಲು ಪ್ರಾರಂಭಿಸಿದನು. ಸಂಘಟನಾ ಶಕ್ತಿಯನ್ನು ಬೆಳೆಸಿಕೊಂಡು ಕೂಲಿಕಾರರ ಸಂಘದ ಮುಖಂಡನಾಗಿ ಅವರ ಹಿತರಕ್ಷಣೆಗಾಗಿ ಮಿಲ್ಲಿನ ಮಾಲಿಕರೊಂದಿಗೆ ಸಂಘರ್ಷಕ್ಕಿಳಿದು ಬಂಡಖೋರನೆಂದು ಪರಿಗಣಿಸಲ್ಪಟ್ಟು ಸೇರೆಮನೆಯನ್ನು ಸೇರಿದನು. ಅಲ್ಲಿ ಅಪರಾಧಿಗಳಿಗೆ ಆಧ್ಯಾತ್ಮಿಕ ವಿಷಯವನ್ನು ಪರಿಣಾಮಕಾರಿಯಾಗಿ ಹೇಳುವುದನ್ನು ಗಮನಿಸಿದ ಅಧಿಕಾರಿಗಳು ಈತನನ್ನು ಬಿಡುಗಡೆ ಮಾಡಿದರು.

ಸೆರೆಮನೆಯಿಂದ ಹೊರಬಂದ ಪೀತಾಂಬರನ ಮನಸ್ಸು ವೈರಾಗ್ಯದತ್ತ ಹೊರಳಿತು. ಸ್ನೇಹಿತ ವಿರುಪಾಕ್ಷಪ್ಪನೊಂದಿಗೆ ಕಾಶಿಯ ವಿಶ್ವೇಶ್ವರನಾಥನ ದರ್ಶನ ಪಡೆದನು. ಕೊರಳಲ್ಲಿ ರುದ್ರಾಕ್ಷಿಮಾಲೆ, ಹಣೆಯ ಮೇಲೆ ವಿಭೂತಿ ಧರಿಸಿ ಅನೇಕ ಪುಣ್ಯಕ್ಷೇತ್ರಗಳ ದರ್ಶನಗೈದು ಸೊಲ್ಲಾಪುರದ ಸಿದ್ಧರಾಮನ ದೇವಾಲಯ ಮತ್ತು ವಿಷ್ಣುಮಿಲ್‌ನಲ್ಲಿ ಪುರಾಣ-ಪ್ರವಚನಗಳನ್ನು ಆರಂಭಿಸಿ ಸಿದ್ಧಪುರುಷ ಎಂದು ಹೆಸರುವಾಸಿಯಾದನು. ಸೊಲ್ಲಾಪುರದಿಂದ ವಿಜಾಪುರಕ್ಕೆ (ವಿಜಯಪುರ) ಆಗಮಿಸಿ, ಅಲ್ಲಿ ಸಂಘವನ್ನು ತೊರೆದು ಬಾಗಲಕೋಟೆಗೆ ಬಂದನು. ಇಲ್ಲಿ ನಾಟಕಗಳ ಪ್ರದರ್ಶನದಲ್ಲಿ ತೊಡಗಿದ್ದ ಕೊಣ್ಣೂರು ನಾಟಕ ಕಂಪನಿಗೆ ಪೀತಾಂಬರನ ಸೇವೆ ಅನಿವಾರ್ಯವಾಯಿತು. ಸಿದ್ಧಪುರುಷನಾಗಿದ್ದ ಈತನು ನಾಟಕ ಕಂಪನಿಯ ಮ್ಯಾನೇಜರನಾಗಿ ಸ್ವತಃ ಪಾತ್ರಗಳನ್ನು ಮಾಡುತ್ತ ವಿಜಾಪುರ, ದಾವಣಗೇರೆ, ಮೈಸೂರು, ಬೆಂಗಳೂರುಗಳಲ್ಲಿ ಯಶಸ್ವಿ ಪ್ರಯೋಗಗಳ ಮೂಲಕ ಕಂಪನಿಯ ಹೆಸರನ್ನು ಎತ್ತಿಹಿಡಿದನು. ಶನಿಪ್ರಭಾವ ನಾಟಕದಲ್ಲಿ ಗಾಣಿಗನ ಪಾತ್ರಕ್ಕೆ ಜೀವತುಂಬಿ ಹಾಸ್ಯರತ್ನಾಕರ ಎಂಬ ಬಿರುದಿಗೆ ಪಾತ್ರನಾದನು. ಆಗಾಗ ಗೋಕಾಕ ನಗರಕ್ಕೆ ಆಗಮಿಸುತ್ತಿದ್ದ ಈತನಿಗೆ ಸಂಬಂಧಿಕರು ಮದುವೆ ಮಾಡಲು ನಿರ್ಧರಿಸಿದರು. ಆದರೆ ನಾಟಕ ಕಂಪನಿಯಲ್ಲಿ ಪಾತ್ರಮಾಡುತ್ತ ಅಲೆದಾಡುವ ಈತನಿಗೆ ಕನ್ಯೆಯನ್ನು ಕೊಡಲು ಯಾರೂ ಒಪ್ಪಲಿಲ್ಲ. ಇದರಿಂದ ಈತನು ಈ ಜನ್ಮದಲ್ಲಿಯೇ ಮದುವೆಯಾಗಲಾರೆ ಎಂದು ದೃಢನಿರ್ಧಾರ ಮಾಡಿದನು. ೧೯೨೩ರಲ್ಲಿ ಆಚಾರ್ಯಶ್ರೀ ಶಾಂತಿಸಾಗರ ಮುನಿಗಳು ಕೊಣ್ಣೂರದಲ್ಲಿ ತಮ್ಮ ೪ನೆಯ ವರ್ಷಾಯೋಗ (ಚಾತುರ್ಮಾಸ) ಆಚರಿಸುತ್ತಿದ್ದರು. ಅವರ ದರ್ಶನ ಪಡೆದು ಧನ್ಯಭಾವದಿಂದ ಮರಳುತ್ತಿದ್ದ ಜನರಿಂದ ಆಕರ್ಷಿತನಾಗಿ ತಾನೂ ಅವರ ದರ್ಶನ ಪಡೆಯಲು ತೆರಳಿದನು. ಇಲ್ಲಿ ಶ್ರೀಗಳ ಪ್ರವಚನದ ಪ್ರಭಾವಕ್ಕೊಳಗಾಗಿ ಬ್ರಹ್ಮಚರ್ಯ ವ್ರತವನ್ನು ಸ್ವೀಕರಿಸಲು ಮುಂದಾದನು. ಶ್ರೀಗಳು ವರ್ಷಾಯೋಗದ ತರುವಾಯ ಗೋಕಾಕ ನಗರಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ಅವರಿಂದಲೇ ೧೯೨೩ರಲ್ಲಿ ಸ್ಥಳೀಯ ಸುಪಾರ್ಶ್ವನಾಥ ಬಸದಿಯಲ್ಲಿ ಐಲಕ ದೀಕ್ಷೆಯನ್ನು ಪಡೆದು ಪಾಯಸಾಗರ ಎಂಬ ಹೆಸರನ್ನು ಪಡೆದನು.

ದೀಕ್ಷೆಯ ತರುವಾಯ ಶ್ರೀಗಳ ಒಪ್ಪಿಗೆ ಪಡೆದು ಶೇಡಬಾಳ ಮತ್ತು ಶಿರೋಳದಲ್ಲಿ ಶಾಸ್ತ್ರಿಗಳಿಂದ ಶಾಸ್ತ್ರ-ಸಿದ್ಧಾಂತಗಳ ಅಧ್ಯಯನ ಮಾಡಿದರು. ತದನಂತರ ಶ್ರೀಗಳ ಸಂಘವನ್ನು ಸೇರಿಕೊಂಡು ನಾಂದಣಿ, ಹರೋಲಿ, ಶೇಡಬಾಳ ಮೊದಲಾದೆಡೆಗಳಲ್ಲಿ ಧರ್ಮಪ್ರಭಾವನೆ ಮಾಡಿದರು. ಪರಿಣಾಮಕಾರಿ ವಿಷಯ ಪ್ರತಿಪಾದನೆ, ಅನುರೂಪವಾದ ದೃಷ್ಟಾಂತಗಳು, ಸಮಯ ಪ್ರಜ್ಞೆಗಳಿಂದ ಕೂಡಿದ ಇವರ ಪ್ರವಚನ ಆಕರ್ಷಣೀಯವಾಗಿತ್ತು. ೧೯೨೪ರಲ್ಲಿ ಆಚಾರ್ಯಶ್ರೀ ಶಾಂತಿಸಾಗರರು ಶ್ರವಣಬೆಳಗೊಳದೆಡೆಗೆ ವಿಹಾರ ಬೆಳೆಸಿದರು. ಅವರ ಸಮ್ಮತಿಯ ಮೇರೆಗೆ ಇವರು ಜಾರ್ಖಂಡ ರಾಜ್ಯದಲ್ಲಿರುವ ಇಪ್ಪತ್ತೆರಡು ತೀರ್ಥಂಕರರ ನಿರ್ವಾಣಭೂಮಿ ತೀರ್ಥರಾಜ ಸಮ್ಮೇದಶಿಖರಕ್ಕೆ ವಿಹಾರ ಕೈಗೊಂಡರು. ಈ ಸಂದರ್ಭದಲ್ಲಿಯೇ ಇವರಿಗೆ ಮೂಲವ್ಯಾಧಿ ತೊಂದರೆ ಆರಂಭವಾಯಿತು. ದಾರಿಯುದ್ದಕ್ಕೂ ತಮ್ಮದೇ ಆದ ಶೈಲಿಯಲ್ಲಿ ಪ್ರವಚನ ಮಾಡುತ್ತ ಸಮಾಜವನ್ನು ಜಾಗೃತಗೊಳಿಸಿ ಅನೇಕ ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸಿದರು. ೧೯೩೦ರಲ್ಲಿ ಸೋನಾಗಿರಿಯಲ್ಲಿ ಆಚಾರ್ಯಶ್ರೀ ಶಾಂತಿಸಾಗರ ಮುನಿಗಳಿಂದಲೇ ನಿರ್ಗ್ರಂಥ ಮುನಿದೀಕ್ಷೆಯನ್ನು ಪಡೆದು ಸ್ವತಂತ್ರ ಚಾತುರ್ಮಾಸಗಳ ಮೂಲಕ ಧರ್ಮಪ್ರಭಾವನೆಯನ್ನು ಕೈಗೊಳ್ಳುತ್ತ ಅಭಿನವ ಸಮಂತಭದ್ರ ಎಂಬ ಗೌರವಕ್ಕೆ ಪಾತ್ರರಾದರು. ಇವರು ಉತ್ತರ ಕರ್ನಾಟಕದ ನೂರಾರು ಗ್ರಾಮಗಳಲ್ಲಿ ಧರ್ಮಪ್ರಸಾರದೊಂದಿಗೆ ಬಸದಿಗಳ ನಿರ್ಮಾಣ, ಜೀರ್ಣೋದ್ಧಾರ, ಶಿಲ್ಪಗಳ ಪ್ರತಿಷ್ಠಾಪನೆ, ಪಂಚಕಲ್ಯಾಣ, ಜೈನ-ಜೈನೇತರರಲ್ಲಿ ಸಮನ್ವಯ, ಸದಾಚಾರ, ಶಾಂತಿ, ಅಹಿಂಸೆ, ವ್ಯಸನಮುಕ್ತಿಗೆ ಪ್ರೇರಣೆ ನೀಡಿ, ತಾವು ಕೇವಲ ಜೈನರ ಗುರುಗಳಾಗಿರದೇ ಮಾನವ ಜಾತಿಯ ಗುರುಗಳೆಂಬುದನ್ನು ಮನವರಿಕೆ ಮಾಡಿಕೊಟ್ಟರು. ಗೋಕಾಕ ನಗರದಲ್ಲಿ ೧೯೩೩ರಲ್ಲಿ ಜರುಗಿದ ಸ್ಯಾದ್ವಾದ ಸಮ್ಮೇಳನದ ಅಧ್ಯಕ್ಷರಾಗಿದ್ದ ಅಂದಿನ ಪ್ರಗತಿಪರ ವಿಚಾರಧಾರೆಯ ಪ್ರತಿಪಾದಕ, ಬಹುಜನ ಸಮಾಜದ ಮುಖಂಡ, ವಿಚಾರವಂತ ದಿವಾನ ಬಹಾದ್ದೂರ ಅಣ್ಣಾಸಾಹೇಬ ಲಠ್ಠೆ ಅವರು ಧಾರ್ಮಿಕ ಅಂಧಾನುಕರಣೆಯನ್ನು ಪ್ರತಿಪಾದಿಸಿದರು. ಆ ಸಮ್ಮೇಳನದ ಅತಿಥಿಗಳಾಗಿದ್ದ ಆಚಾರ್ಯ ಪಾಯಸಾಗರರು ಧರ್ಮದ ಶಾಶ್ವತ ಸ್ವರೂಪ ಲೋಕಕಲ್ಯಾಣ ಮಾರ್ಗವನ್ನು ವಿವರಣಾತ್ಮಕವಾಗಿ ಪ್ರತಿಪಾದಿಸಿದರು. ಇವರಿಂದ ಪ್ರಭಾವಿತರಾದ ಅಣ್ಣಾಸಾಹೇಬ ಲಠ್ಠೆ ಅವರು ಶ್ರೀಗಳನ್ನು ಅಭಿನವ ಸಮಂತಭದ್ರ, ಸ್ಯಾದ್ವಾದ ಕೇಸರಿ ಎಂದಿತ್ಯಾಗಿ ಕೊಂಡಾಡಿದರು. ಸಮ್ಮೇಳನದ ತರುವಾಯ ಶ್ರೀಗಳ ಸಂಘವು ಶ್ರವಣಬೆಳಗೊಳದೆಡೆಗೆ ವಿಹಾರ ಕೈಗೊಂಡು ದಾರಿಯುದ್ದಕ್ಕೂ ಧರ್ಮಪ್ರಭಾವನೆ ಮಾಡುತ್ತ ಜೈನ ಮತ್ತು ಜೈನೇತರರನ್ನೂ ಆಕರ್ಷಿಸಿತು.

ಕಾರ್ಕಳದಲ್ಲಿ ವೈದಿಕ ಸಮಾಜದ ಅಪೇಕ್ಷೆಯ ಮೇರೆಗೆ ಶ್ರೀಗಳು ಭಗವದ್ಗೀತೆಯ ಕುರಿತು ಮಾಡಿದ ಅಮೋಘ ಪ್ರವಚನದ ಪ್ರಭಾವದಿಂದ ಜೈನೇತರರೂ ಇವರ ಶಿಷ್ಯರಾದರು. ಹುಬ್ಬಳ್ಳಿಯಲ್ಲಿ ೧೯೪೦ರಲ್ಲಿ ಜರುಗಿದ ಪಂಚಕಲ್ಯಾಣದ ಸಂದರ್ಭದಲ್ಲಿ ಶ್ರೀಗಳು ಭರತೇಶ ವೈಭವದ ಕುರಿತು ಮಾಡಿದ ಪ್ರವಚನಕ್ಕೆ ಮಾರುಹೋದ ಸಮಾಜವು ಇವರನ್ನು ಸ್ಯಾದ್ವಾದಕೇಸರಿ, ಸದ್ಬೋಧ ರತ್ನಾಕರ ಎಂಬ ಉಪಾಧಿಗಳಿಂದ ಗೌರವಿಸಿತು. ೧೯೪೫ರಲ್ಲಿ ಅಕ್ಕೋಳದ ಸಮಾಜವು ಶ್ರೀಗಳಿಗೆ ಆಚಾರ್ಯ ಪದವಿಯನ್ನಿತ್ತು ಗೌರವಿಸಿತು. ಶ್ರೀಗಳು ಕುಂಥಲಗಿರಿ ಕ್ಷೇತ್ರದೆಡೆಗೆ ವಿಹಾರ ಮಾಡುತ್ತಿದ್ದ ಸಂದರ್ಭದಲ್ಲಿ, ತಮ್ಮ ದೀಕ್ಷಾಗುರು ಆಚಾರ್ಯಶ್ರೀ ಶಾಂತಿಸಾಗರ ಮುನಿಗಳ ದರ್ಶನ ಪಡೆಯಲು ಆಸಕ್ತರಾದರು. ಇಪ್ಪತ್ತೈದು ವರ್ಷಗಳ ತರುವಾಯ ಈ ಗುರು-ಶಿಷ್ಯರ ಅಪೂರ್ವ ಸಂಗಮ ದಹಿಗಾಂವದಲ್ಲಾಯಿತು. ೧೯೫೨ರಲ್ಲಿ ಗುರು-ಶಿಷ್ಯರ ಸಂಘಗಳು ಪ್ರತ್ಯೇಕವಾಗಿ ವಿಹಾರ ಮುಂದುವರೆಸಿದವು. ಆಚಾರ್ಯಶ್ರೀ ಪಾಯಸಾಗರರು ಫಲಟಣದಲ್ಲಿ ಸರ್ವಧರ್ಮೀಯರನ್ನುದ್ದೇಶಿಸಿ ಮಾಡಿದ ರಾಜಧರ್ಮ, ರಾಷ್ಟ್ರಧರ್ಮ, ಆತ್ಮಧರ್ಮ, ವರ್ಣಧರ್ಮ ಇತ್ಯಾದಿ ವಿಷಯಗಳನ್ನೊಳಗೊಂಡ ಪ್ರವಚನದಿಂದ ಪ್ರಭಾವಿತ ಸಮಾಜವು ಇವರಿಗೆ ಭವ್ಯರತ್ನ ಚೂಡಾಮಣಿ, ಚಿದಾನಂದಚಿತಸ್ವರೂಪ ಪದವಿಗಳನ್ನು ಅರ್ಪಿಸಿತು. ೧೯೫೩ರಲ್ಲಿ

ಆಳಂದದಲ್ಲಿ ಚಾತುರ್ಮಾಸವನ್ನು ಆಚರಿಸುತ್ತಿದ್ದ ಸಂದರ್ಭದಲ್ಲಿ ಇವರ ದರ್ಶನಕ್ಕಾಗಿ ಆಗಮಿಸಿದ್ದ ಕನ್ನಡ ಪ್ರಸಿದ್ಧ ಕವಿ ಸಿದ್ಧಯ್ಯ ಪುರಾಣಿಕರು ಪ್ರವಚನದ ಪ್ರಭಾವಕ್ಕೊಳಗಾಗಿ ಶ್ರೀಗಳಿಗೆ ಪ್ರವಚನ ಪರಮೇಷ್ಠಿ ಪದವಿಯನ್ನಿತ್ತು ಗೌರವಿಸಿದರು. ಇದೇ ರೀತಿ ಶ್ರೀಗಳು ೧೯೫೦ರಲ್ಲಿ ಪಂಡರಪುರದಲ್ಲಿ ಮಾಡಿದ ಮಾನವಧರ್ಮ ಕುರಿತು ಆತ್ಮಬೋಧಪರ ಉದ್ಬೋಧಕ ಪ್ರವಚನದ ಪ್ರಭಾವಕ್ಕೊಳಗಾದ ಜೈನೇತರ ಸಂತಶಿರೋಮಣಿ ತನಪುರೆ ಮಹಾರಾಜರು ಆಳಂದಕ್ಕೂ ಆಗಮಿಸಿ ಇವರ ಸಾನಿಧ್ಯದಲ್ಲಿ ಮೂರು ದಿನಗಳ ಕಾಲವಿದ್ದು ಇವರ ದಿನನಿತ್ಯದ ಕ್ರಿಯೆಗಳಿಗೆ ಮಾರುಹೋಗಿದ್ದಾರೆ.

ಆಚಾರ್ಯಶ್ರೀ ಶಾಂತಿಸಾಗರರು ಕುಂಥಲಗಿರಿಯಲ್ಲಿ ೧೯೫೫ರ ಸಪ್ಟೆಂಬರ ೧೪ರಂದು ಯಮಸಲ್ಲೇಖನ ತೆಗೆದುಕೊಂಡಿದ್ದರು. ಆ ಸಂದರ್ಭದಲ್ಲಿ ಶ್ರೀಗಳು ಇಂಡಿಯಲ್ಲಿ ಚಾತುರ್ಮಾಸವನ್ನು ಆಚರಿಸುತ್ತಿದ್ದರು. ಅನಾರೋಗ್ಯದ ನಿಮಿತ್ತ ಇವರಿಗೆ ಅಲ್ಲಿಗೆ ಹೋಗಲು ಆಗದೇ ತಮ್ಮ ಪರವಾಗಿ ಮಹಾಬಲ ಮತ್ತು ವಿಜಯಸೇನ ಮುನಿಗಳನ್ನು ಕಳುಹಿಸಿಕೊಟ್ಟರು. ೧೯೫೫ರ ಸಪ್ಟೆಂಬರ್ ೧೮ರಂದು ಸಮಾಧಿಯಾದರೆಂಬ ಸಮಾಚಾರ ಬಂದಿತು. ಈ ದಿನದಿಂದಲೇ ಶ್ರೀಗಳು ಆಹಾರ, ವಾಸ್ತವ್ಯ, ಪತ್ರವ್ಯವಹಾರ ಮತ್ತು ಬಾಹ್ಯ ಕ್ರಿಯೆಗಳಲ್ಲಿ ಬದಲಾವಣೆ ಮಾಡಿಕೊಂಡು ಆತ್ಮಧ್ಯಾನ ಜಪ-ತಪದಲ್ಲಿ ತೊಡಗಿ ಸಮಾಧಿ ಸಮ್ಮುಖರಾದರು. ಶ್ರೀಗಳ ಸಂಘವು ವಿಜಾಪುರದಲ್ಲಿದ್ದ ಸಂದರ್ಭದಲ್ಲಿ ಸೊಲ್ಲಾಪುರ ಜಿಲ್ಲೆಯ ನ್ಯಾಯಾಧೀಶರಾಗಿದ್ದ ಟಿ.ಕೆ. ತುಕೋಲ ಅವರು ಅಪರಿಗ್ರಹದ ಕುರಿತು ಪರಿಣಾಮಕಾರಿಯಾಗಿ ಮಾತನಾಡಿ ಶ್ರೀಗಳ ಮೆಚ್ಚುಗೆ ಪಡೆದರು. ಶ್ರೀಗಳು ೧೯೫೭ರಲ್ಲಿ ಸ್ತವನಿಧಿಯಲ್ಲಿ ಚಾತುರ್ಮಾಸವನ್ನು ಆಚರಿಸುತ್ತಿದ್ದ ಸಂದರ್ಭದಲ್ಲಿ, ಆಹಾರದಲ್ಲಿ ಕೆಲವು ಹಣ್ಣು ಮತ್ತು ಧಾನ್ಯಗಳನ್ನು ಯಮನಿಯಮದ ಮೂಲಕ ತ್ಯಾಗಮಾಡಿ ಅನಾರೋಗ್ಯದಿಂದಾಗಿ ದರ್ಶನಾರಾಧನೆ, ಜ್ಞಾನಾರಾಧನೆ, ತಪಾರಾಧನೆ ಮಾಡುತ್ತ ಸಮ್ಯಕ್ ಸಮಾಧಿಯನ್ನು ಬಯಸಿ ತಮ್ಮ ಶಿಷ್ಯ ಅನಂತಕೀರ್ತಿ ಮುನಿಗಳಿಗೆ ಆಚಾರ್ಯ ಪದವನ್ನು ನೀಡಿ ಸಂಘವನ್ನು ಮುನ್ನಡೆಸಲು ಆಶೀರ್ವದಿಸಿದರು. ೧೯೫೮ರ ಚಾತುರ್ಮಾಸವೂ ಸ್ತವನಿಧಿಯಲ್ಲಾಯಿತು. ಈ ಅವಧಿಯಲ್ಲಿಯೇ ೧೯೫೮ರ ಅಕ್ಟೋಬರ ೧೨ರಂದು ಬೆಳಗಿನ ೯ ಗಂಟೆಗೆ ಶ್ರೀಗಳ ಆತ್ಮದ ಸ್ವರ್ಗಾರೋಹಣವಾಯಿತು. ಜೈನ ಶಾಸ್ತ್ರ-ದರ್ಶನ, ತತ್ವ-ಸಿದ್ಧಾಂತಗಳಲ್ಲಿ ಪಾರಂಗತರಾಗಿದ್ದ ಶ್ರೀಗಳು ಕನ್ನಡ ಮತ್ತು ಮರಾಠಿಯಲ್ಲಿ ಹಲವು ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ದಿಗಂಬರ ಜೈನ ತೀರ್ಥವಂದನಾ, ತ್ರಿಮೂಢತಾಖಂಡನ, ಜೈನ ಬಾಲಬೋಧೆ, ಸ್ವಾಮಿಕಾರ್ತಿಕೇಯಾನುಪ್ರೇಕ್ಷಾ, ಸಜ್ಜನಚಿತ್ತವಲ್ಲಭ ಕೃತಿಗಳು ಪ್ರಮುಖವಾಗಿವೆ.

ಆಚಾರ್ಯಶ್ರೀ ಪಾಯಸಾಗರ ಮುನಿಗಳು (೧೮೮೫-೧೯೫೮) ಧರ್ಮಪ್ರಭಾವನೆಯ ಉದ್ದೇಶದಿಂದ ಅನೇಕ ಸಲ ಅಣ್ಣಿಗೇರಿಗೆ ಭೇಟಿ ಕೊಟ್ಟಿದ್ದರು.೫೨ ಅಣ್ಣಿಗೇರಿಯ ಗಂಗಪೆರ್ಮಾಡಿ ಶಾಂತಿನಾಥ ಬಸದಿಯ ಎಡಬದಿಯಲ್ಲಿ ಯಾವುದೋ ಕಾರ್ಯಕ್ಕಾಗಿ ೧೯೪೦ರಲ್ಲಿ ಅಗೆಯುತ್ತಿದ್ದ ಸಂದರ್ಭದಲ್ಲಿ, ಮುಂಜಾಗ್ರತ ಕ್ರಮದಿಂದ ಹೂಳಲ್ಪಟ್ಟಿದ್ದ ಪಾರ್ಶ್ವನಾಥ ಮತ್ತು ಆದಿನಾಥ ತೀರ್ಥಂಕರರ ಕ್ರಿ.ಶ. ಸುಮಾರು ೧೨ನೆಯ ಶತಮಾನದ ಶಿಲ್ಪಗಳು ದೊರೆತಿದ್ದವು. ಆಚಾರ್ಯಶ್ರೀ ಪಾಯಸಾಗರ ಮಹಾರಾಜರು ೧೯೪೧ರಲ್ಲಿ ವಿಹಾರ ಕೈಗೊಂಡು ಅಣ್ಣಿಗೇರಿಗೆ ಆಗಮಿಸಿದ್ದರು. ಅವರು ಸ್ಥಳೀಯ ಬಸದಿಯ ಆವರಣದಲ್ಲಿದ್ದ ಪ್ರಾಚೀನ ಆದಿನಾಥ, ಸುಪಾರ್ಶ್ವನಾಥ, ಪಾರ್ಶ್ವನಾಥ ತೀರ್ಥಂಕರರ ಶಿಲ್ಪಗಳನ್ನು ಗಮನಿಸಿದರು. ಇವುಗಳನ್ನು ಪ್ರಮಾಣಬದ್ಧವಾಗಿ ವಜ್ರಲೇಪನ (ಜೀರ್ಣೋದ್ಧಾರ) ಮಾಡಿಸಿದರೆ ನೂತನ ಬಸದಿಗಳಲ್ಲಿ ಪುನರ್ ಪ್ರತಿಷ್ಠಾಪನೆಗೆ ಅರ್ಹವಾಗುತ್ತವೆ ಎಂದು ದೇಶಪಾಂಡೆ ಮನೆತನದ ಭೀಮಪ್ಪಯ್ಯ ಅವರ ಧರ್ಮಪತ್ನಿ ಪುಷ್ಪಾವತಿಬಾಯಿ ಅವರ ಮನವೊಲಿಸಿದರು. ಅವರ ಶಿಷ್ಯ ಬೆಳಗಾವಿಯ ವೀರಪ್ಪ ಶಹಾಪುರ ಎಂಬುವವನು ನೂತನ ಶಿಲ್ಪಗಳ ಕಂಡರಣೆ ಮತ್ತು ಪ್ರಾಚೀನ ಶಿಲ್ಪಗಳ ಜೀರ್ಣೋದ್ಧಾರ (ವಜ್ರಲೇಪನ) ಮಾಡುವುದರಲ್ಲಿ ಹೆಸರುವಾಸಿಯಾಗಿದ್ದನು. ಆತನನ್ನು ಅಣ್ಣಿಗೇರಿಗೆ ಬರಮಾಡಿಕೊಂಡು ಇಲ್ಲಿಯ ಎರಡೂ ಶಿಲ್ಪಗಳನ್ನು ಜೀರ್ಣೋದ್ಧಾರ ಮಾಡಿಸಿದರು.

ಪುಷ್ಪಾವತಿಬಾಯಿ ದೇಶಪಾಂಡೆ ಅವರು ೧೯೪೫ರಲ್ಲಿ ಗಂಗಪೆರ್ಮಾಡಿ ಬಸದಿಯನ್ನು ಜೀರ್ಣೋದ್ಧಾರ ಮಾಡಿಸಿ, ಇದರ ಗರ್ಭಗೃಹದಲ್ಲಿ ಪ್ರತಿಷ್ಠಾಪಿತವಾಗಿದ್ದ ಮೂಲನಾಯಕ ಶಾಂತಿನಾಥ ತೀರ್ಥಂಕರನ ತ್ರುಟಿತ ಶಿಲ್ಪವನ್ನು ಸ್ಥಳಾಂತರಿಸಿ, ಆ ಸ್ಥಳದಲ್ಲಿ ವೀರಪ್ಪನು ೧೯೪೧ರಲ್ಲಿ ಜೀರ್ಣೋದ್ಧಾರ ಮಾಡಿದ ಪಾರ್ಶ್ವನಾಥ ತೀರ್ಥಂಕರನ ಶಿಲ್ಪವನ್ನು ಕೊಲ್ಲಾಪುರದ ಭಟ್ಟಾರಕ ಪೀಠದ ೨೭ನೆಯ ಪೀಠಾಧಿಪತಿಗಳಾದ ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಪಟ್ಟಾಚಾರ್ಯ ಸ್ವಾಮೀಜಿ (೧೮೯೭-೧೯೭೫) ಅವರ ಹಸ್ತದಿಂದ ಪ್ರತಿಷ್ಠಾಪಿಸಿ ಪಂಚಕಲ್ಯಾಣಪೂಜಾ ಮಹೋತ್ಸವವನ್ನು ಮಾಡಿಸಿದಳು.೫೩ ಆಚಾರ್ಯಶ್ರೀ ಪಾಯಸಾಗರ ಮುನಿಗಳ ಸಲಹೆ-ಸೂಚನೆಯ ಮೇರೆಗೆ ಆದಿನಾಥನ ಶಿಲ್ಪವನ್ನು ಮಹಾರಾಷ್ಟ್ರದ ಹಾತಕಣಗಲಾ ತಾಲ್ಲೂಕಿನ ಬಾಹುಬಲಿ ಆಶ್ರಮದಲ್ಲಿ (ಕುಂಭೋಜದ ಹತ್ತಿರ) ನಿರ್ಮಾಣವಾಗುತ್ತಿದ್ದ ಬಸದಿಯಲ್ಲಿ ಪ್ರತಿಷ್ಠಾಪಿಸಲು, ಸುಪಾರ್ಶ್ವನಾಥನ ಶಿಲ್ಪವನ್ನು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಹೆಗ್ಗೇರಿಯ ಪ್ರಾಚೀನ ಬಸದಿಯಲ್ಲಿ ಪ್ರತಿಷ್ಠಾಪಿಸಲು ಮತ್ತು ಶಾಂತಿನಾಥನ ಶಿಲ್ಪವನ್ನು ಚಿಕ್ಕೋಡಿ ತಾಲ್ಲೂಕಿನ ಮಾನಾಕಾಪುರದಲ್ಲಿ ನಿರ್ಮಾಣವಾಗುತ್ತಿದ್ದ ಬಸದಿಯಲ್ಲಿ ಪ್ರತಿಷ್ಠಾಪಿಸಲು ಕಳುಹಿಸಿಕೊಡಲಾಗಿದೆ. ಗಂಗಪೆರ್ಮಾಡಿ ಶಾಂತಿನಾಥ ಬಸದಿ ೧೯೪೫ರಿಂದ ಪಾರ್ಶ್ವನಾಥ ಬಸದಿ ಎಂದು ಮರುನಾಮಕರಣ ಪಡೆದಿದೆ.೫೪

### ೩. ಸಮಾರೋಪ

ಅಣ್ಣಿಗೇರಿ ಪರಿಸರದಾದ್ಯಂತ ಜೈನ ಧರ್ಮದ ಪ್ರಸಾರದೊಂದಿಗೆ ಶಾಂತಿ ಮತ್ತು ಸೌಹಾರ್ದತೆಯ ಸಂದೇಶ ಸಾರುತ್ತ ಸಮಾಜವನ್ನು ಜಾಗೃತಗೊಳಿಸಿದ ಈ ಮೇಲಿನ ಮುನಿಗಳು ಮತ್ತು ಭಟ್ಟಾರಕರು ಬಸದಿ, ಶಿಲ್ಪ, ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಕೊಡಮಾಡಿದ ಸ್ಫೂರ್ತಿ-ಪ್ರೇರಣೆ ಅಪಾರವಾಗಿದೆ. ಜೈನ ಧರ್ಮದ ಮುನಿಪರಂಪರೆಯಲ್ಲಿ 'ಮುನಿಗಳು' ಮತ್ತು 'ಭಟ್ಟಾರಕರು' ಎಂಬೆರಡು ವರ್ಗಗಳಿವೆ. ಮುನಿಗಳು ಚಾತುರ್ಮಾಸದ (ವರ್ಷಾಯೋಗ) ಅವಧಿಯನ್ನು ಹೊರತುಪಡಿಸಿ ಉಳಿದೆಲ್ಲ ಸಂದರ್ಭಗಳಲ್ಲಿ ಸದಾ ಸಂಚಾರದಲ್ಲಿಯೇ ಇರುತ್ತಾರೆ. ಭಟ್ಟಾರಕರು ಬಸದಿಗಳಿಗೆ ಹೊಂದಿಕೊಂಡಂತೆ ಇರುತ್ತಿದ್ದ ಮಠಗಳಲ್ಲಿದ್ದುಕೊಂಡು ಆಯಾ ಬಸದಿಗಳ ಪೂಜಾ-ಪುನಸ್ಕಾರಗಳು, ದಾನ-ದತ್ತಿಗಳ ಸ್ವೀಕರಣೆ, ನಿರ್ವಹಣೆ, ಸದುಪಯೋಗದೊಂದಿಗೆ ವಿವಿಧ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಮೊದಲಾದ ಚಟುವಟಿಕೆಗಳನ್ನೂ ಕೈಗೊಳ್ಳುತ್ತಿದ್ದರು.

ಅಣ್ಣಿಗೇರಿ ಮತ್ತು ಗದಗ ತಾಲ್ಲೂಕಿನ ಗಾವರವಾಡದ ಕ್ರಿ.ಶ. ೧೦೭೧-೭೨ರ ಶಾಸನಗಳಲ್ಲಿ ಉಲ್ಲಿಖಿತ ವಿದ್ಯಾನಂದಿ ಮತ್ತು ಮಾಣಿಕ್ಯನಂದಿ ಮುನಿಗಳು ತಮ್ಮ ಅಪಾರವಾದ ಪಾಂಡಿತ್ಯದಿಂದ ನಾಡಿನಾದ್ಯಂತಲೂ ಪ್ರಸಿದ್ಧರಾಗಿದ್ದರು. ಕೂಹುಂಡಿನಾಡಿನ ಉಪ ಆಡಳಿತ ಘಟಕವಾಗಿದ್ದ ತೇರಿದಾಳ ಹನ್ನೆರಡು ಪ್ರದೇಶವನ್ನು

ಸವದತ್ತಿ ರಟ್ಟರ ಅಧೀನದಲ್ಲಿ ಗೊಂಕದೇವನು ಆಳುತ್ತಿದ್ದನು.೫೫ ವಿದ್ಯಾನಂದಿ ಮತ್ತು ಮಾಣಿಕ್ಯನಂದಿ ಮುನಿಗಳಿಬ್ಬರೂ ವಿಹಾರ ಕೈಗೊಂಡು ತೇರದಾಳ ಪಟ್ಟಣಕ್ಕೆ ಹೋಗಿದ್ದರು. ಈ ಸಂಗತಿ 'ನಾಗಸ್ತ್ರೀ ನೋಂಪಿಯ ಕಥೆ'ಯಲ್ಲಿ ಸೊಗಸಾಗಿ ನಿರೂಪಿತವಾಗಿದೆ.೫೬ ಗೊಂಕದೇವ (ನಾಗಸ್ತ್ರೀ ನೋಂಪಿಯಲ್ಲಿ ವಂಕಭೂಪಾಲ ಎಂದು ಕರೆಯಲಾಗಿದೆ) ಮತ್ತು ಆತನ ಧರ್ಮಪತ್ನಿ ಲಕ್ಷ್ಮೀಮತಿ ಇಬ್ಬರೂ ಈ ಮುನಿಗಳನ್ನು ಭಕ್ತಿಯಿಂದ ಬರಮಾಡಿಕೊಂಡು ಆಹಾರದಾನವನ್ನು ಕೊಟ್ಟು ತೃಪ್ತಿಪಡಿಸಿದರು. ಆ ದಂಪತಿಗಳು ಈ ಮುನಿಗಳಿಗೆ ಕೈಮುಗಿದು 'ಮುನಿಗಳೇ ಅಪೂರ್ವ ಸಂಸಾರ ಸಾಗರದಿಂದ ಪಾರಾಗಿ ಪುಣ್ಯವನ್ನು ಸಂಪಾದಿಸಲು ನಮಗೆ ಯಾವುದಾದರೊಂದು ನೋಂಪಿಯನ್ನು ಹೇಳಿರಿ' ಎಂದು ಕೇಳಿದರು. ಆಗ ಈ ಮುನಿಗಳು ನಾಗಸ್ತ್ರೀ ನೋಂಪಿ ಆಚರಣೆಯ ವಿಧಾನವನ್ನು ಸವಿಸ್ತಾರವಾಗಿ ಹೇಳಿದರು. ಮುನಿಗಳು ದಿವ್ಯ ತಪೋಮಹಿಮೆಯಿಂದ ನಾಗಸ್ತ್ರೀ ನೋಂಪಿಯ ಮಹಿಮೆಯನ್ನು ಹೇಳಿದುದನ್ನು ಗೊಂಕದೇವನು ಕೇಳಿ, ಹರ್ಷಚಿತ್ತನಾಗಿ ಈ ನೋಂಪಿಯನ್ನು ಕೈಗೊಂಡು ಸುಖವನ್ನು ಅನುಭವಿಸಿದನು.

ಅಣ್ಣಿಗೇರಿಯ ಮತ್ತು ಇತರೆಡೆಯ ಶಾಸನಗಳಲ್ಲಿ ಉಲ್ಲಿಖಿತ ಅಣ್ಣಿಗೇರಿಯ ಕೆಲವು ಜೈನ ಮುನಿಗಳು ಸಿದ್ಧಾಂತಚಕ್ರವರ್ತಿಗಳಾಗಿದ್ದರು. ಮತ್ತೆ ಕೆಲವರು ತ್ರೈವಿದ್ಯದೇವರಾಗಿದ್ದರು. ಧರಸೇನಾಚಾರ್ಯರ ಶಿಷ್ಯರಾದ ಪುಷ್ಪದಂತ ಮತ್ತು ಭೂತಬಲಿ ಮುನಿಗಳು ಕೂಡಿಕೊಂಡು ಕ್ರಿ.ಶ. ೭೩ರಲ್ಲಿ ಹದಿನಾಲ್ಕು ಪೂರ್ವಗಳಲ್ಲಿ ಎರಡನೆಯದಾದ ಅಗ್ರಾಯಣೀಯ ಐದನೆಯ ಚಯನಲಬ್ಧಿ ವಸ್ತುವಿನ ಇಪ್ಪತ್ತು ಪ್ರಾಭೃತಗಳಲ್ಲಿ ನಾಲ್ಕನೆಯ ಮಹಾಕರ್ಮಪ್ರಕೃತಿ ಪ್ರಾಭೃತದ ಜೀವಸ್ಥಾನ, ಕ್ಷುದ್ರಬಂಧ, ಬಂಧಸ್ವಾಮಿತ್ವವಿಚಯ, ವೇದನಾ, ವರ್ಗಣಾ, ಮಹಾಬಂಧ ಎಂಬ ಆರು ಖಂಡಗಳಲ್ಲಿ ರಚಿಸಿರುವ ಸೂತ್ರಗಳ ಆಗಮವು 'ಷಟ್ಖಂಡಾಗಮ' ಎಂದು ಹೆಸರಾಗಿದೆ. ಈ ಆಗಮದ ಆರೂ ಖಂಡಗಳಲ್ಲಿ ಜ್ಞಾನವನ್ನು ಸಂಪಾದಿಸಿದ ಮುನಿಗಳನ್ನು 'ಸಿದ್ಧಾಂತಚಕ್ರವರ್ತಿ' ಎಂತಲೂ, ಪ್ರಥಮ ಮೂರು ಖಂಡಗಳಲ್ಲಿ ಜ್ಞಾನವನ್ನು ಸಂಪಾದಿಸಿದ ಮುನಿಗಳನ್ನು 'ತ್ರೈವಿದ್ಯದೇವ' ಎಂತಲೂ ಕರೆಯಲಾಗುತ್ತಿತ್ತು. ಈ ಎಲ್ಲ ಮುನಿಗಳು ಮತ್ತು ಭಟ್ಟಾರಕರು ಅಣ್ಣಿಗೇರಿ ಪರಿಸರದಾದ್ಯಂತಲೂ ಸಂಚರಿಸಿ ಜನಸಾಮಾನ್ಯರಿಗೆ ಬಸದಿಗಳ ನಿರ್ಮಾಣ, ಜೀರ್ಣೋದ್ಧಾರ, ಶಿಲ್ಪಗಳ ಪ್ರತಿಷ್ಠಾಪನೆ, ಆರಾಧನೆ, ಪಂಚಕಲ್ಯಾಣ ಪೂಜಾಮಹೋತ್ಸವ, ವ್ರತ, ನಿಯಮ, ಆಚಾರಗಳ ಪಾಲನೆಗೆ ಪ್ರೇರಣೆ ನೀಡಿದ್ದಾರೆ. ಅವರ ಸ್ಫೂರ್ತಿಯಿಂದ ಈ ಪರಿಸರದ ನವಲಗುಂದ, ಪಡೆಸೂರು, ಆಹೆಟ್ಟಿ, ಹಾಳಕುಸುಗಲ್ಲ, ತಡಹಾಳ, ಮೊರಬ, ಜಾವೂರು, ಬಟ್ಟಕೆರೆ (ಇಂದಿನ ಗದಗ ನಗರದ ಬೆಟಗೇರಿ), ಭದ್ರಾಪುರ, ಗುಡಿಸಾಗರ, ಅಳಗವಾಡಿ, ಶಲವಡಿ, ನಾವಳ್ಳಿ, ಕಿತ್ತೂರು, ತುಪ್ಪದ ಕುರಹಟ್ಟಿ, ನಾಗರಹಳ್ಳಿ ಮೊದಲಾದ ಗ್ರಾಮಗಳಲ್ಲಿ ಬಸದಿಗಳು ನಿರ್ಮಾಣವಾಗಿದ್ದವು. ಆ ಬಸದಿಗಳೆಲ್ಲವೂ (ಅಣ್ಣಿಗೇರಿಯ ಗಂಗಪೆರ್ಮಾಡಿ ಬಸದಿಯನ್ನು ಹೊರತುಪಡಿಸಿ) ತಂಜಾವೂರಿನ ಚೋಳರ ಕೋ-ಪರಕೇಸರಿ ರಾಜೇಂದ್ರನು ಬೆಳ್ವೊಲ-೩೦೦ ನಾಡಿನ ಮೇಲೆ ಕೈಗೊಂಡ ಆಕ್ರಮಣಗಳಲ್ಲಿ ಆತನ ಸೈನ್ಯಪಡೆಯ ಕೋಪಾಗ್ನಿಯಲ್ಲಿ, ಮುಸಲ್ಮಾನರ ದಾಳಿಗಳಲ್ಲಿ, ಕೆಲವು ಉಗ್ರವಾದಿ ಧರ್ಮಪಕ್ಷಪಾತಿಗಳ ನಾಶಕ್ರಿಯೆಗಳಲ್ಲಿ ಮತ್ತು ಸಮಕಾಲೀನ ಧಾರ್ಮಿಕ, ಸಾಮಾಜಿಕ ಸಂಘರ್ಷಣೆಗಳಲ್ಲಿ ಸಮೂಲನಾಶವಾಗಿವೆ.೫೭ ಸುದೈವದಿಂದ ಆ ಬಸದಿಗಳಲ್ಲಿ ಪ್ರತಿಷ್ಠಾಪಿತವಾಗಿದ್ದ ಕೆಲವು ಶಿಲ್ಪಗಳು ಇಂದಿಗೂ ಉಳಿದು ಬಂದಿವೆ.

**ಅಡಿಟಿಪ್ಪಣಿಗಳು**

1. ಮಹೀಶವಾಡಿ ಬಿ.ಬಿ., "ಮುನಿಧರ್ಮ'", ಕರ್ನಾಟಕ ಭಾರತಿ ಸಂ. ೭/೧ (ಅಗಸ್ಟ್-೧೯೭೪), ಪು. ೨೪-೩೮, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
2. ಬ್ರಹ್ಮಪ್ಪ ಜಿ., ರತ್ನಾಕರನ ಶತಕ ಸಾಹಿತ್ಯ (ಪುನರ್ಮುದ್ರಣ-೨೦೦೬), ಪು. ೭೪.
3. ಹಂಜೆ ಅಪ್ಪಣ್ಣ ಎನ್., ಶಿಗ್ಗಾಂವ ಪ್ರದೇಶದ ಪುರಾತತ್ವ (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ-೨೦೦೬), ಪು. ೨೮೯-೨೯೦, ಪ್ರಾಚೀನ ಭಾರತದ ಇತಿಹಾಸ ಮತ್ತು ಶಾಸನವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
4. ಶಾಮರಾಯ ತ.ಸು. (ಸಂ.), ಕೇಶಿರಾಜ ವಿರಚಿತ ಶಬ್ದಮಣಿದರ್ಪಣಂ (ಪರಿಷ್ಕೃತ ಮುದ್ರಣ-೨೦೦೮), ಪು. ೨೦೭-೨೦೮.
5. ಹಿರೇಮಲ್ಲೂರು ಈಶ್ವರನ್, ಲಿಂಗಾಯತ, ಜೈನ ಮತ್ತು ಬ್ರಾಹ್ಮಣ ಧರ್ಮಗಳು : ಮತಗಳ ಒಂದು ತೌಲನಿಕ ಅಧ್ಯಯನ (೧೯೯೭), ಪು. ೧೫೬.
6. ಗೋಗಿ ಹನುಮಾಕ್ಷಿ (ಸಂ.), ಲಕ್ಷ್ಮೇಶ್ವರ : ಸಾಂಸ್ಕೃತಿಕ ಅಧ್ಯಯನ (೨೦೧೫), ಶಾ.ಸಂ. ೧೭.
7. ಹಂಜೆ ಅಪ್ಪಣ್ಣ ಎನ್., "ಬಂಕಾಪುರ ಪರಿಸರದ ಬಸದಿಗಳು", ಸಮವಸರಣ (ಸಂಶೋಧನ ಲೇಖನಗಳ ಸಂಕಲನ-೨೦೧೫), ಪು. ೧೪೬.
8. ಎ.ಆಯ್. ಸಂ. ಘಿಘಿಖ, ಶಾ.ಸಂ. ೨೩/ಬಿ.
9. ಅದೇ, ಶಾ.ಸಂ. ೨೩/ಎ.
10. ಹಂಪ ನಾಗರಾಜಯ್ಯ, "ಗಾವರವಾಡ ಶಾಸನದ ಆಯಾಮಗಳು", ಚಂದ್ರಕೊಡೆ (ಸಂಶೋಧನ ಲೇಖನಗಳ ಸಂಗ್ರಹ-೧೯೯೭), ಪು. ೪೬೮.
11. ಎ.ಆಯ್. ಸಂ. ಘಿಘಿಖ, ಶಾ.ಸಂ. ೨೩/ಬಿ.
12. ಅದೇ, ಶಾ.ಸಂ. ೨೩/ಎ.
13. ಅದೇ, ಶಾ.ಸಂ. ೨೩/ಬಿ.
14. ಅದೇ, ಶಾ.ಸಂ. ೨೩/ಎ.
15. ಎ.ಕ. ಸಂ. ಖಖ, ಶಾ.ಸಂ. ೭೩.
16. ಎ.ಆಯ್. ಸಂ. ಘಿಘಿಖ, ಶಾ.ಸಂ. ೨೩/ಬಿ.
17. ಅದೇ, ಶಾ.ಸಂ. ೨೩/ಎ
18. ದೇವರಕೊಂಡಾರೆಡ್ಡಿ (ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨ (ಕೊಪ್ಪಳ ಜಿಲ್ಲೆ),ಶಾ.ಸಂ.೮೧,ಪು.೬೫-೬೬.
19. ಎ.ಆಯ್. ಸಂ. ಘಿಘಿಖ, ಶಾ.ಸಂ. ೨೩/ಬಿ.
20. ಅದೇ, ಶಾ.ಸಂ. ೨೩/ಎ
21. ಅದೇ, ಶಾ.ಸಂ. ೨೩/ಬಿ.
22. ಅದೇ, ಶಾ.ಸಂ. ೨೩/ಎ.
23. ಅದೇ, ಶಾ.ಸಂ. ೨೩/ಬಿ.
24. ಅದೇ, ಶಾ.ಸಂ. ೨೩/ಎ.
25. ದೇವರಕೊಂಡಾರೆಡ್ಡಿ(ಸಂ.),ಕನ್ನಡವಿಶ್ವವಿದ್ಯಾಲಯ ಶಾಸನ ಸಂಪುಟ-೨ (ಕೊಪ್ಪಳ ಜಿಲ್ಲೆ),ಶಾ.ಸಂ.೧೧೧,ಪು.೧೦೬-೧೦೭.
26. ಅದೇ.
27. ಅದೇ, ಶಾ.ಸಂ. ೧೧೯, ಪು. ೧೧೪-೧೧೫.
28. ಎ.ಆಯ್. ಸಂ. ಘಿಘಿಖ, ಶಾ.ಸಂ. ೨೩/ಬಿ.

29. ಅದೇ, ಶಾ.ಸಂ. ೨೩/ಎ.
30. ದೇವರಕೊಂಡಾರೆಡ್ಡಿ (ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೨ (ಕೊಪ್ಪಳ ಜಿಲ್ಲೆ),ಶಾ.ಸಂ.೮೧, ಪು.೬೫–೬೬.
31. ಅದೇ, ಶಾ.ಸಂ. ೬೨, ಪು. ೫೬–೫೭.
32. ಅದೇ, ಶಾ.ಸಂ. ೮೦, ಪು. ೬೩–೬೫.
33. ಅದೇ, ಶಾ.ಸಂ. ೧೨೭, ಪು. ೧೨೬–೧೨೮.
34. ಎ.ಆಯ್. ಸಂ. ಘಿಘಿಖ, ಶಾ.ಸಂ. ೨೩/ಬಿ.
35. ಅದೇ, ಶಾ.ಸಂ. ೨೩/ಎ.
36. ಅದೇ.
37. ಎ.ಆಯ್. ಸಂ. ಘಿಘಿಖ, ಶಾ.ಸಂ. ೨೩/ಬಿ.
38. ಅದೇ, ಶಾ.ಸಂ. ೨೩/ಎ.
39. ಎ.ಕ. ಸಂ. ಖಖ, ಶಾ.ಸಂ. ೭೩.
40. ಎ.ಆಯ್. ಸಂ. ಘಿಘಿಖ, ಶಾ.ಸಂ. ೨೩/ಬಿ.
41. ಅದೇ, ಶಾ.ಸಂ. ೨೩/ಎ.
42. ಹಂಜೆ ಅಪ್ಪಣ್ಣ ಎನ್., "ಅಣ್ಣಿಗೇರಿಯ ಸುಮತಿನಾಥನ ಶಿಲ್ಪ ಮತ್ತು ಪಾದಪೀಠ ಶಾಸನ", ಸ್ಟಡೀಸ್ ಇನ್ ಕರ್ನಾಟಕ ಹಿಸ್ಟ್ರಿ ಆ್ಯಂಡ್ ಕಲ್ಚರ್ ಪ್ರೋಸಿಡಿಂಗ್ಸ್ ವಾಲ್ಯೂಮ್–ಗಿಖಖ (ಫೆಬ್ರುವರಿ–೨೦೦೮), ಪು. ೯೭–೯೮.
43. ಅದೇ.
44. ಎಸ್.ಆಯ್.ಆಯ್. ಸಂ. ಘಿಗಿ, ಶಾ.ಸಂ. ೬೧೩.
45. ದೇವರಕೊಂಡಾರೆಡ್ಡಿ (ಸಂ.), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೨ (ಕೊಪ್ಪಳ ಜಿಲ್ಲೆ), ಶಾ.ಸಂ. ೧೦೯, ಪು. ೧೦೩–೧೦೪.
46. ಎ.ಕ. ಸಂ. ಖಖ, ಶಾ.ಸಂ. ೭೩.
47. ಹಂಜೆ ಅಪ್ಪಣ್ಣ ಎನ್., "ಅಣ್ಣಿಗೇರಿಯ ಎರಡು ಜೈನ ಶಿಲಾಫಲಕ ಶಾಸನಗಳು", ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂ. ೮೩/೨ (ಜುಲೈ/ಸಪ್ಟೆಂಬರ್–೨೦೦೫), ಪು. ೫೭–೬೦, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
48. ಸಂಗವೆ ವಿಲಾಸ, "ಕರವಿರವೈಭವ ಶ್ರೀ ಲಕ್ಷ್ಮಿಸೇನ ಭಟ್ಟಾರಕ ಪೀಠ : ಪರಂಪರಾ ವ ಕಾರ್ಯ", ಪರಮಪೂಜ್ಯ ಪಟ್ಟಾಚಾರ್ಯ ಭಟ್ಟಾರಕರತ್ನ ಸ್ವಸ್ತಿಶ್ರೀ ಲಕ್ಷ್ಮಿಸೇನ ಮಹಾಸ್ವಾಮೀಜಿ ಷಷ್ಠ್ಯಬ್ದಿಪೂರ್ತಿ ಗೌರವ ಅಂಕ (೨೦೦೩), ಪು. ೧–೪, ಕೊಲ್ಲಾಪುರ.
49. ಕ್ಷೇತ್ರಕಾರ್ಯದಲ್ಲಿ ಹೊಸದಾಗಿ ಬೆಳಕಿಗೆ ಬಂದಿರುವ ಅಪ್ರಕಟಿತ ಶಾಸನ.
50. ಕ್ಷೇತ್ರಕಾರ್ಯದಲ್ಲಿ ಹೊಸದಾಗಿ ಬೆಳಕಿಗೆ ಬಂದಿರುವ ಅಪ್ರಕಟಿತ ಶಾಸನ.
51. ಪಾಟೀಲ ಎಸ್.ಪಿ. (ಸಂ.), ಸ್ಯಾದ್ವಾದ ಕೇಸರಿ (ಆಚಾರ್ಯಶ್ರೀ ಪಾಯಸಾಗರ ಶತಮಾನೋತ್ಸವ ಸ್ಮರಣ ಸಂಚಿಕೆ–೧೯೯೨), ಪು. ೧–೧೩, ಗೋಕಾಕ. ನ್ಯಾಮಗೌಡ ಬಿ.ಪಿ. (ಸಂ.), ಮಹಾಬಲ ಕೃತ ಸ್ಯಾದ್ವಾದ ಕೇಸರಿ (೨೦೦೯), ಕವಿಪ್ರಭಾ ಪ್ರಕಾಶನ ಆಲಗೂರು.
52. ನ್ಯಾಮಗೌಡ ಬಿ.ಪಿ. (ಸಂ.), ಮಹಾಬಲಕೃತ ಸ್ಯಾದ್ವಾದ ಕೇಸರಿ (ಆಚಾರ್ಯಶ್ರೀ ಪಾಯಸಾಗರ ಮಹಾರಾಜರ ಚರಿತ್ರೆ ಗ್ರಂಥ–೨೦೦೯), ಪು. ೧೪೮–೧೪೯, ೧೫೩, ೧೫೬, ೧೬೭.
53. ಹಂಜೆ ಅಪ್ಪಣ್ಣ ಎನ್. "ಅಣ್ಣಿಗೇರಿಯ ಎರಡು ಜೈನ ಶಿಲಾಫಲಕ ಶಾಸನಗಳು", ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂ.೮೨/೩ (ಜುಲೈ/ಸೆಪ್ಟಂಬರ–೨೦೦೮), ಪು. ೫೭–೬೦, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
54. ಹಂಜೆ ಅಪ್ಪಣ್ಣ ಎನ್., "ಅಣ್ಣಿಗೇರಿಯ ಜೈನ ದೇಸಗತಿ ಮನೆತನ (ಆದಿಕವಿ ಪಂಪನ ವಂಶಸ್ಥರು)", ಶೋಧ (ಜುಲೈ–೨೦೧೩), ಪು. ೩೨–೫೧, ಡಾ. ಹಾಮಾನಾ ಸಂಶೋಧನ ಕೇಂದ್ರ ಉಜಿರೆ.
55. ಕೆ.ಆಯ್. ಸಂ. ಗಿ, ಶಾ.ಸಂ. ೨೧.
56. ಹಂಪ ನಾಗರಾಜಯ್ಯ (ಸಂ.), ನೋಂಪಿಯ ಕಥೆಗಳು (೨೦೦೧), ನೋಂಪಿಯ ಕಥೆ ಸಂಖ್ಯೆ : ೩೬, ಪು. ೧೯೬–೧೯೭.
57. ಹಂಜೆ ಅಪ್ಪಣ್ಣ ಎನ್., ಲಕ್ಕುಂಡಿಯ ಬಸದಿಗಳು (೨೦೧೫), ಪು. ೬೮–೭೯.